


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 312 | Wednesday 27-08-2025 | E-mail : maruti.b.hosamani76@gmail.com | Page: 4 | Price : Rs. 1/-


## ಅರಣ್ಯದಲ್ಲಿ ಕುರಿಗೆ ಪ್ರವೇಶ ಕಲ್ಪಿಸಿ ಹಾಗೂ ಜಾನುವಾರುಗಳಿಗೆ ಔಷಧಿ ನೀಡುವಂತೆ ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿ ರಸ್ತೆ ಉದ್ದಕ್ಕೂ ಕುರಿಗಳೊಂದಿಗೆ ಪ್ರತಿಭಟನೆ





**ಸಿಹಿ ಕಹಿ ಸುದ್ದಿ**

**ಕೊಟ್ಟೂರು :** ಪಟ್ಟಣದ ಸುತ್ತ ಮುತ್ತಲಿನ ಕುರಿ ಕಾಯುವವರ ಸಮಸ್ಯೆ ಕುರಿತು ಸರ್ಕಾರ-ಕ್ಕೆ ಮನವಿ. ಸರ್ಕಾರವು ಅರಣ್ಯ ಪ್ರದೇಶಗಳಲ್ಲಿ ಕುರಿ ಗಾಯಿಗಳಿಗೆ ಕುರಿ ಮೇಯಿಸುವ ಅವಕಾಶ ಹಾಗೂ ಜಾನುವಾರುಗಳಿಗೆ ಉಚಿತ ಔಷಧಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಮಂಗಳವಾರ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಯಿತು.

ಈ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಈರುಳ್ಳಿ ಬೆಳೆಗಾರರ ಜಿಲ್ಲಾಧ್ಯಕ್ಷರಾದ ಅಲಬೂರು ಮಂಜುನಾಥ ರವರು ಕುರಿಗಾಯಿಗಳ ಸಮಸ್ಯೆ ವಿಪರೀತವಾಗಿದ್ದು. ಕುರಿಗಳನ್ನು ಅರಣ್ಯದಲ್ಲಿ ಮೇಯಿಸಲು ಬಿಟ್ಟರೆ ಅರಣ್ಯ ಅಧಿಕಾರಿಗಳು ದೌರ್ಜನ್ಯದಿಂದ ವರ್ತಿಸುತ್ತಾರೆ ಮತ್ತು ಕುರಿಗಾಯಿಗಳ ಮೇಲೆ ಕೇಸ್ ದಾಖಲಿಸುತ್ತಾರೆ ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕಿ ಸರ್ಕಾರವು ಅರಣ್ಯದಲ್ಲಿ ಕುರಿ ಮೇಯಿಸಲು

**ಈ ಪ್ರತಿಭಟನೆಯು ಬಸವೇಶ್ವರ ತೇರು ಬಯಲು ಮುಂಭಾಗದಿಂದ ಪ್ರಾರಂಭ ಗೊಂಡು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಸಾವಿರಾರು ಕುರಿಗಳೊಂದಿಗೆ ರಸ್ತೆಯನ್ನು ಬಂದ್ ಮಾಡುವ ಮೂಲಕ ಪ್ರಮುಖ ರಸ್ತೆಯ ಮಾರ್ಗವಾಗಿ ತಾಲೂಕು ಕಚೇರಿ ವರೆಗೆ ಸಾಗಿತು. ಪೊಲೀಸ್ ಬಿಗಿ ಬಂದೋಬಸ್ತ್ ನೀಡಲಾಗಿತ್ತು.**

ಅನುಕೂಲ ಮಾಡಿ ಕೊಡಬೇಕೆಂದು ಒತ್ತಾಯಿಸಿದರು.

ಈ ಸರ್ಕಾರವು ಕುರಿ ಗಾಯಿಗಳ ಸಮಸ್ಯೆಯನ್ನು ಆಲಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಕೆಲವೊಂದು ಅರಣ್ಯ ಪ್ರದೇಶಗಳಲ್ಲಿ ಕುರಿಗಳನ್ನು ಭಯ ಬೀಳಿಸುವ ಸಲುವಾಗಿ ಚಿರತೆ ಬಿಟ್ಟು ಕುರಿಗಳನ್ನು ನಾಶ ಪಡಿಸುವ ವ್ಯವಸ್ಥೆ ನಿರ್ಮಾಣ ಮಾಡುತ್ತಿದ್ದಾರೆ ಇದನ್ನು ಅರಣ್ಯ ಸಚಿವರು ಗಂಭೀರವಾಗಿ ಪರಿಶೀಲಿಸ ಬೇಕಾಗಿದೆ ಮತ್ತು ಜಾನುವಾರುಗಳಿಗೆ ಸರಿಯಾದ ಔಷಧಿ ಇಲ್ಲದೆ ಹಲವಾರು ಸಮಸ್ಯೆಗೆ ಈಡಾಗಿವೆ ಕುರಿ ಗಾಯಿಗಳು ಸೌಲಭ್ಯ ವಂಚಿತರಾಗಿ ಸಂಕಷ್ಟಕ್ಕೆ ಈಡಾಗಿದ್ದಾರೆ ಸರ್ಕಾರ ಇವರ ಸಮಸ್ಯೆಗಳನ್ನ ಆಲಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟವನ್ನು ನಡೆಸ ಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ತಾಲೂಕ ಪ್ರಧಾನ ಕಾರ್ಯದರ್ಶಿ ಗುಡಿಯರ್ ಮಲ್ಲಿಕಾರ್ಜುನ್ ಮಾತನಾಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮೂಗಪ್ಪ ನವರು ಮಾತನಾಡಿದರು. ನಂತರ ಮಾನ್ಯ ತಹಶೀಲ್ದಾರ್ ಜಿ. ಅಮರೇಶ್ ರವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಡಿ.ಎಸ್.ಎಸ್ ತಾಲೂಕ ಅಧ್ಯಕ್ಷ ಪಿ.ಚಂದ್ರಶೇಖರ್, ಗಣೇಶ್, ಡಿ.ಕೊಟ್ರೇಶ್, ಪರುಸಪ್ಪ, ಬಾಲಗಂಗಾಧರ್, ರೇವಪ್ಪ, ಬಸಪ್ಪ, ಉಮೇಶ್, ಕೆಂಚಪ್ಪ, ಮುಂತಾದವರು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

## ತಾಲೂಕ ಮಟ್ಟದ ಅಧಿಕಾರಿಗಳ ಸಭೆ ನಡೆಸಿದ ಸಚಿವರು





**ಸಿಹಿ ಕಹಿ ಸುದ್ದಿ**

**ಮಾನ್ವಿ :** ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಪ್ರವಾಸಿ ಮಂದಿರದಲ್ಲಿ ತಾಲೂಕ ಮಟ್ಟದ ಅಧಿಕಾರಿಗಳ ಸಭೆಯನ್ನು ನಡೆಸಿದ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರಾದ ಶ್ರೀ ಎನ್.ಎಸ್ ಬೋಸರಾಜು ಹಾಗೂ ಮಾನ್ವಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ್ ಸಾಹುಕಾರ್ ಇವರು. ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಮಾನ್ವಿ ಪುರಸಭೆ ಅಧಿಕಾರಿಗಳಿಗೆ ಏಘಖ ಅಧಿಕಾರಿಯದ ಚೌಹಾನ್ ಇವರುಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ.

ಮಾನ್ಯ ಸಚಿವರು ಮತ್ತು ಶಾಸಕರು ನಗರ ಹಾಗೂ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜೆ.ಜೆ.ಎಂ ಅಮೃತ್ ಕಾಮಗಾರಿಗಳ ಪ್ರಗತಿ ಪರಿಶೀಲಿಸಿ ಕಾಮಗಾರಿಯ ಗುಣಮಟ್ಟದ ಪ್ರಮಾಣ ಪತ್ರವನ್ನು ನೀಡ ಬೇಕಾದರೆ ಕಾಮಗಾರಿಯನ್ನು ಸಂಪೂರ್ಣವಾಗಿ ವೀಕ್ಷಿಸಿ ಹಾಗೂ ಕ್ರಮಬದ್ಧವಾಗಿ ಯಾವುದೇ ತರಹದ ಅರ್ಧ ಕೆಲಸವನ್ನು ಮುಗಿಸಿ ಅರ್ಧಕ್ಕೆ ನಿಲ್ಲಿಸಿ ಮತ್ತು ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದು ಕೊಳ್ಳದೆ ಇರುವ ಕಾಮಗಾರಿಗಳಿಗೆ ಪ್ರಮಾಣ ಪತ್ರವನ್ನು ನೀವು ನೀಡಿದರೆ ಅಂತಹ ಅಧಿಕಾರಿಗಳ ವಿರುದ್ಧ ಮೇಲಾಧಿಕಾರಿಗಳಿಗೆ ವಜಾ ಗೊಳಿಸಲು ಶಿಫಾರಸ್ಸು ಮಾಡಲಾಗುವುದು ಎಂದು ಖಡಕ್ ಸೂಚನೆ ನೀಡಿದರು.

ಲೋಕಾಪಯೋಗಿ ಇಲಾಖೆಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ವೇಗವನ್ನು ಹೆಚ್ಚಿಸಲು ಇದೇ ಸಂದರ್ಭದಲ್ಲಿ ಮಾನ್ಯ ಸಚಿವರು ಸಂಬಂಧಿಸಿದ ಎಇ ಗಳಿಗೆ ಸೂಚನೆ ನೀಡಿದರು.

ಕೃಷಿ ಅಧಿಕಾರಿಗಳಿಗೆ ಎರಡು ತಾಲೂಕಿನಾದ್ಯಂತ ಯೂರಿಯಾ ಗೊಬ್ಬರದ ಸಮಸ್ಯೆ ಆಗದ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಕಟ್ಟುನಿಟ್ಟಾದ ಸೂಚನೆ ನೀಡಿದರು.

ದುಬಾರಿ ಬೆಲೆಗೆ ಯೂರಿಯಾ ಗೊಬ್ಬರವನ್ನು ಮಾರುವುದು ಕಂಡು ಬಂದಲ್ಲಿ ಅವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲು ಈ ಸಂದರ್ಭದಲ್ಲಿ ಮಾನ್ಯ ಸಚಿವರು ಮತ್ತು ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಡಿವೈಎಸ್ಪಿ ಹಾಗು ಪಿ.ಐ ಅವರೊಂದಿಗೆ ಮುಂದಿನ ದಿನಗಳಲ್ಲಿ ನಡೆಯುವ ಹಬ್ಬಗಳಲ್ಲಿ ಶಾಂತಿ ರೀತಿಯಿಂದ ಹಬ್ಬವನ್ನು ಆಚರಿಸಲು ಎಲ್ಲರಿಗೂ ಶಾಂತಿ ಸುವ್ಯವಸ್ಥೆ ರೀತಿಯಲ್ಲಿ ಹಬ್ಬವನ್ನು ಆಚರಿಸಲು ಕಟ್ಟುನಿಟ್ಟಾದ ಸೂಕ್ತ ಬಂದೋಬಸ್ತ್ ಏರ್ಪಡಿಸಲು ಸೂಚಿಸಿದರು.

ನೀರ್ ಮಾನ್ವಿ ಎಲ್ಲಮ್ಮ ದೇವಸ್ಥಾನದ ಕಾಮಗಾರಿ ನಿಧಾನ ಗತಿಯಲ್ಲಿ ಸಾಗಿರುವುದನ್ನು ಮಾನ್ಯ ಸಚಿವರು ಮತ್ತು ಶಾಸಕರ ಗಮನಕ್ಕೆ ಗ್ರಾಮದ ಮುಖಂಡರುಗಳು ಸಚಿವರ ಬಳಿ ತಿಳಿಸಿದಾಗ ಕೂಡಲೇ ಸಚಿವರು ಸಭೆಯಲ್ಲಿದ್ದ ತಾಲೂಕ ದಂಡಾಧಿಕಾರಿ ಹಾಗೂ ದೇವಸ್ಥಾನದ ಕಾರ್ಯದರ್ಶಿಗಳಾದ ಕಂದಾಯ ನಿರೀಕ್ಷಕರನ್ನು ಆದಷ್ಟು ಶೀಘ್ರದಲ್ಲಿ ಕಾಮಗಾರಿಯನ್ನು ಪೂರ್ಣ ಗೊಳಿಸಿ ಭಕ್ತಾದಿಗಳಿಗೆ ಆ ದೇವಸ್ಥಾನದ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡಲು ಸೂಚನೆಯನ್ನು ನೀಡಿದರು.

ಇಂದಿನ ಸಭೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳಾದ

ತಹಸೀಲ್ದಾರ್ ಮಾನ್ವಿ EO TP ಮಾನ್ವಿ, BEO, RFO, ADA, AEE AE, JE PWD, AEE PRED, AEE RWS, AEE GESCOM MANVI & AEE KRIDL, NK, Cashutec, ಮಾನ್ವಿ ಪುರಸಭೆಯ ಮುಖ್ಯ ಅಧಿಕಾರಿಗಳು & Amrut -2 KWS ಎಂಜಿನೀರ್ಸ್ BO, THO ಇನ್ನೂ ಹಲವಾರು ಅಧಿಕಾರಿಗಳು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## "ಅಷ್ಟ ಸಿದ್ಧಿಗಳ ಒಡೆಯ".....




**ಮೋದಕ, ಬೂಂದಿ, ಲಡ್ಡು ಪ್ರಿಯನು**
**ಸಿದ್ಧಿ ವಿನಾಯಕ ವಿದ್ಯಾ ಪ್ರದಾಯಕನು**
**ಮಂಗಳ ಪೂಜೆಯ ಪಡೆಯುವ ಬೆನಕನು**
**ಸದಾ ನಮ್ಮನ್ನು ಕಾಪಾಡುವ ಗಣೇಶನು**

**ತಂದೆಯಾದ ಶಿವನಿಂದ ಆಶಿರ್ವದಿಸಲ್ಪಟ್ಟ ಗಣೇಶನು**
**ಪಾರ್ವತಿ ದೇವಿಯ ಪ್ರೀತಿಯ ಪುತ್ರನು**
**ಬಲಿಷ್ಟರಾದ ವಿಘ್ನಗಣಗಳನ್ನು ಸೃಷ್ಟಿಸಿದನು**
**ಭಾದ್ರಪದ ಮಾಸ ಚೌತಿಯ ದಿನ ಗಣೇಶ ಆಗಮಿಸುವನು**

**ಹುಟ್ಟುವಾಗಲೇ ಆನೆಯ ಮುಖವನ್ನು ಹೊಂದಿದ್ದನು**
**ಪ್ರಮುಖ ದೇವತೆಗಳಲ್ಲಿ ಅಗ್ರಜ ಸ್ಥಾನ ವಿನಾಯಕನು**
**ಲಕ್ಷ್ಮಿ ಮತ್ತು ಸರಸ್ವತಿ ದೇವಿಯ ಆಶೀರ್ವಾದ ಪಡೆದವನು**
**ಎಲ್ಲ ವಿಘ್ನಗಳನ್ನು ನಿವಾರಿಸುವ ವಿಘ್ನೇಶ್ವರನು**

**ಜೀವನದಲ್ಲಿ ಸುಖ ಶಾಂತಿ ನೆಮ್ಮದಿ ಕರುಣಿಸಲಿ**
**ಸಕಲ ಐಶ್ವರ್ಯ ಆರೋಗ್ಯ ನೀಡಿ ಹರಸಲಿ**
**ಚೌತಿ ಎಲ್ಲರ ಬಾಳಿಗೂ ಶುಭದಾಯಕವಾಗಿರಲಿ**
**ಗಣೇಶ ಚತುರ್ಥಿಯ ಶುಭಾಶಯಗಳು**

**ಕು. ಜ್ಯೋತಿ ಆನಂದ ಚಂದುಕರ**
**ಬಾಗಲಕೋಟ/9980180487**

## "ವಿದ್ಯಾಪತಿ ವಿನಾಯಕ".....



**ಭಾದ್ರಪದ ಮಾಸದ ಗಣೇಶ ಚೌತಿಯು**
**ಸಿದ್ಧಿ ವಿನಾಯಕನಿಗೆ ವಾಹನ ಚಿಕ್ಕ ಇಲಿಯು**
**ಬಹಳ ಪ್ರಸಿದ್ಧಿ ಕ್ಷಿಪ್ರ ಪ್ರಸಾದನ ಬುದ್ಧಿವಂತಿಕೆಯು**
**ದೇವರಿಂದ ಜನ್ಮ ಪಡೆದ ನಮ್ಮ ವಿಶ್ವಮುಖನು**

**ಶಿವ ಪಾರ್ವತಿಯರ ಪ್ರೀತಿಯ ಸ್ಕಂದಪೂರ್ವಜನು**
**ವಿದ್ಯೆಗಿವನೇ ಭೂಷಣ ನಮ್ಮ ಗಜಮುಖನು**
**ನಿನ್ನ ಪೂಜಿಸಿದೊಡೆ ಗಾನಪತ್ಯನಾದೆ ನಾನು**
**ಸದಾ ಕಾಪಾಡುವ ದೇವಲೋಕದ ದೈವ ನೀನು**

**ಮತ್ತೆ ಬಂದಿದೆ ಸಡಗರದ ಯಜ್ಞಕಾಯನ ಉತ್ಸವವು**
**ತುಂಬಿದೆ ಹರ್ಷ ಭೂಮಿಯ ತುಂಬೆಲ್ಲವು**
**ನಿತ್ಯ ಕಡಬು ಹೋಳಿಗೆಯ ನೈವೇದ್ಯವು**
**ಸ್ಥಾಪಿಸಿ ಮಣ್ಣಿನ ಗಣಪತಿಯ ಪೂಜಿಸೋಣ ನಾವು ನೀವು**

**ಸಿಡಿಸದಿರಿ ಜೋರಾಗಿ ಎಲ್ಲೆಡೆ ಪಟಾಕಿಗಳನ್ನು**
**ಗೊತ್ತಿದ್ದರೂ ನಾಶಮಾಡಬೇಡಿ ಪ್ರಕೃತಿಯ ಸೊಬಗನ್ನು**
**ಮಹಾ ಗಣಪತಿಯ ವಿಸರ್ಜನೆಯಲಿ**
**ಮರೆಯದಿರಿ ಪ್ರತಿಜ್ಞೆಯನ್ನು**
**ನಿರ್ವಿಘ್ನತಾ ಸಿದ್ಧಿಗಾಗಿ ಮೊದಲ ಪೂಜೆ ದೇವಾ ನಿಮಗಿನ್ನು**

**ಸಕಲ ಕಾರ್ಯಗಳಿಗೂ ಮುಂದಿರುವ ಸಿದ್ಧಿವಿನಾಯಕನೇ**
**ನಂಬಿದ ಪಾಲಿನ ಭಕ್ತರ ಕೈ ಬಿಡದ ಮೂಷಿಕವಾಹನನೇ**
**ಭೂಮಿಯ ಮೇಲಿನ ಎಲ್ಲರ ಕಷ್ಟ ನಿವಾರಿಸುವ ವಕ್ರತುಂಡನೇ**
**ಭೂಲೋಕದ ಉದ್ಧಾರಕ್ಕಾಗಿ ಜನಿಸಿದ ಲಂಬೋದರನೇ**

**ಏಕದಂತ ಬಂದು ನಮಗೆಲ್ಲ ಹರ್ಷವ ತಂದನು**
**ನಲಿಯುತ ಕುಣಿಯುತ ನಾನಾವೇಷದಿ ಬಂದನು**
**ಗರಿಕೆಯ ಹುಲ್ಲಿನಲಿ ಸಕಲರ ಪ್ರೀತಿಯ ಕಂಡನು**
**ಬೇಡಿದ ವರವನು ಭಕ್ತರಿಗೆ ದಯಪಾಲಿಸಿಹನು**

**-ಶ್ರೀ ಮುತ್ತು ಯ ವಡ್ಡರ**
**ಶಿಕ್ಷಕರು, ಬಾಗಲಕೋಟ**
**9845568484**

## ಕೃಷ್ಣಾ ನದಿಗೆ 1.15 ಲಕ್ಷ ಕ್ಯೂಸೆಕ್ ಒಳ ಹರಿವು ನದಿ ತೀರದ ತಮದಡ್ಡಿಯಲ್ಲಿ ಐದು ಅಡಿಯಷ್ಟು ನೀರು ಹೆಚ್ಚಳ !



**ತೇರದಾಳ :** ಜಿಲ್ಲೆಯ ಜೀವನಾಡಿ ಕೃಷ್ಣಾ ನದಿಗೆ ಮಹಾರಾಷ್ಟ್ರದಿಂದ 1.15 ಲಕ್ಷ ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಇದರಿಂದ ಬಾಗಲಕೋಟೆ ಜಿಲ್ಲೆಗೆ ಪ್ರವೇಶ ಮಾಡುವ ತಾಲೂಕಿನ ನದಿ ತೀರದ ತಮದಡ್ಡಿ ಗ್ರಾಮದಲ್ಲಿ ದಿಢೀರನೆ ಐದು ಅಡಿಯಷ್ಟು ನೀರು ಹೆಚ್ಚಳಗೊಂಡಿದೆ.

ಇದೇ ರೀತಿ ಇನ್ನೂ ಮೂರ್ನಾಲ್ಕು ದಿನ ಮುಂದುವರೆದರೆ, ಕೃಷ್ಣೆ ಒಡಲು ದಾಟಿ ಹೊರಗೆ ಬರುವಳು. ಇದರಿಂದ ಕ್ರಮೇಣವಾಗಿ ಜಮೀನುಗಳಲ್ಲಿ ನೀರು ನುಗ್ಗುವುದರ ಜತೆಗೆ ಗ್ರಾಮದೊಳಗೆ ಬರಲು ಪ್ರಾರಂಭಗೊಳ್ಳುತ್ತದೆ ಎಂದು ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಈ ಸಲ ಪ್ರವಾಹ ಎದುರಾಗುವುದಿಲ್ಲ ಎಂದುಕೊಂಡಿದ್ದೇವೆ. ಆದರೆ ಮಹಾರಾಷ್ಟ್ರದ ಮುಂಬಯಿ, ಪುಣೆ, ಮಹಾಬಳೇಶ್ವರ, ಸಾತಾರಾ, ಕರಾಡ, ಕೊಲ್ಲಾಪುರ ಸೇರಿದಂತೆ ಹಲವೆಡೆ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಕೊಯ್ನಾ, ದೂಧಗಂಗಾ, ಪಂಚಗಂಗಾ, ರಾಜಾಪುರ ಹಾಗೂ ಬೇರೆ ಬೇರೆ ಜಲಾಶಯಗಳಿಂದ ಅಪಾರ ಪ್ರಮಾಣದಲ್ಲಿ ಕೃಷ್ಣಾ ನದಿಗೆ ನೀರು ಹರಿದು ಬರುತ್ತಿದೆ. ಇನ್ನು ಹಿಪ್ಪರಗಿ ಆಣೆಕಟ್ಟಿನ ಎಲ್ಲ ಗೇಟ್ಗಳನ್ನು ತಗೆದಿದ್ದ-ರಿಂದ ನೀರು ಅಷ್ಟೇ ಪ್ರಮಾಣದಲ್ಲಿ ಆಲಮಟ್ಟಿ ಜಲಾಶಯಕ್ಕೆ ಹೋಗುತ್ತಿದೆ.

ಆದರೆ ನೀರು ಹರಿಯುವಿಕೆ ತೀವ್ರವಾಗಿ ವೇಗವಾಗಿರುವುದರಿಂದ ನದಿ ದಡಕ್ಕೆ ಯಾರು ಹೋಗುವ ದುಸ್ಸಾಹಸ ಮಾಡುತ್ತಿಲ್ಲ. ಜತೆಗೆ ತಮದಡ್ಡಿ ಮಾರ್ಗವಾಗಿ ನೆರೆಯ ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಹಳ್ಳಿಗಳಿಗೆ ಕಲ್ಪಿಸುವ ಬೋಟ್ ಸಂಚಾರ ವ್ಯವಸ್ಥೆ ಸ್ಥಗಿತಗೊಂಡಿದೆ.

ಇದರಿಂದ ಪ್ರಯಾಣಿಕರು ರಸ್ತೆ ಮುಖಾಂತರ ಹೋಗುವಂತಾಗಿದೆ.

ತಹಸೀಲ್ದಾರ್ ಭೇಟಿ- ಏತನ್ಮಧ್ಯೆ ಕೃಷ್ಣಾ ನದಿಗೆ ಒಳ ಹರಿವು ಹೆಚ್ಚಳಗೊಂಡಿದ್ದರಿಂದ ತೇರದಾಳ ತಹಸೀಲ್ದಾರ್ ವಿಜಯಕುಮಾರ ಕಡಕೋಳ ಬುಧವಾರ ತಮದಡ್ಡಿ ಗ್ರಾಮಕ್ಕೆ ಭೇಟಿ ನೀಡಿ ನದಿಯ ನೀರಿನ ಮಟ್ಟ ಪರಿಶೀಲಿಸಿದರು. ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿರುವುದರಿಂದ ಕೃಷ್ಣಾ ನದಿಗೆ ನೀರಿನ ಒಳ ಹರಿವು ಹೆಚ್ಚಳಗೊಂಡಿದೆ. ಗ್ರಾಮಸ್ಥರು ಯಾವುದೇ ಕಾರಣಕ್ಕೂ ನದಿ ದಡಕ್ಕೆ ಹೋಗಬಾರದು. ಜಾನುವಾರಗಳನ್ನು ಕೂಡ ಬಿಡಬಾರದು ಎಂದು ಸೂಚನೆ ನೀಡಿದರು.

ತಮದಡ್ಡಿ ಗ್ರಾಮ ಮುಳುಗಡೆ ಎಂದು ಘೋಷಣೆಯಾಗಿ ಹದಿನೈದು ವರ್ಷಗಳಾಯಿತು. ಇನ್ನೂ ಸ್ಥಳಾಂತ-ರಿಸುವ ಕೆಲಸ ಮಾಡುತ್ತಿಲ್ಲ. ಅಧಿಕಾರಿಗಳು ಬರೀ ಮಳೆಗಾಲ ಬಂದ ಸಂದರ್ಭದಲ್ಲಿ ಮಾತ್ರ ಬರುತ್ತೀರಿ. ನಮ್ಮ ಸಮಸ್ಯೆ ಹಾಗೂ ಬೇಡಿಕೆಗೆ ಸ್ಪಂದಿಸುವುದಿಲ್ಲ. ಮೊದಲು ತಮದಡ್ಡಿ ಗ್ರಾಮ ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳಿ ಎಂದು ಗ್ರಾಮದ ಮುಖಂಡ ಮಹಾವೀರ ಬಿಲವಡಿ, ರಾಜಕುಮಾರ ಶಿರಹಟ್ಟಿ ಮತ್ತಿತರರು ತಹಸೀಲ್ದಾರರನ್ನು ಒತ್ತಾಯಿಸಿದರು. ಗ್ರಾಮ ಆಡಳಿತಾಧಿಕಾರಿ ಗುಂಡಿ, ಪಿಡಿಓ ಪ್ರಕಾಶ ಕನ್ನೊಳಿ ಹಾಜರಿದ್ದರು.

## ಗಣೇಶ ಚತುರ್ಥಿ,ಈದ್ ಮಿಲಾದ್ ನಿಮಿತ್ಯ ಶಾಂತಿ ಸಭೆ:

### ಡಿಜೆ ಬಿಡಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ: ಡಿವೈಎಸ್ಪಿ ವಿಶ್ವನಾಥ ರಾವ್ ಕುಲಕರ್ಣಿ

**ಇಲಕಲ್ :** ಆಗಸ್ಟ್ 21 ಗುರುವಾರ ಕರ್ನಾಟಕ ರಾಜ್ಯ ಪೊಲೀಸ್ ಹಾಗೂ ಬಾಗಲಕೋಟೆ ಜಿಲ್ಲಾ ಪೊಲೀಸ್ ಹಾಗೂ ಗ್ರಾಮೀಣ, ಶಹರ್ ಪೊಲೀಸ್ ಠಾಣೆ , ಕಂದಾಯ ಇಲಾಖೆ, ನಗರಸಭೆ, ತಾಲೂಕು ಪಂಚಾಯತಿ, ವಿದ್ಯುತ್ ಇಲಾಖೆ, ಅಗ್ನಿಶಾಮಕ ಇಲಾಖೆ ಎಲ್ಲ ಇಲಾಖೆಗಳ ಅಧಿಕಾರಿಗಳ ಉಪಸ್ಥಿತಿಯಲ್ಲಿ ಇಳಕಲ್ ಪೊಲೀಸ್ ಸ್ಟೇಷನನಲ್ಲಿ ಗಣೇಶ ಹಬ್ಬ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಶಾಂತಿ ಸಭೆ ನಡೆಯಿತು. ಶಾಂತಿ ಸಭೆಯನ್ನು ಕುರಿತು ಮಾತನಾಡಿದ ಡಿವೈಎಸ್ಪಿ ವಿಶ್ವನಾಥ ರಾವ್ ಕುಲಕರ್ಣಿ ಎರಡು ಹಬ್ಬಗಳನ್ನು ಶಾಂತ ರೀತಿಯಿಂದ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬವನ್ನು ಆಚರಿಸೋಣ, ಸರ್ಕಾರದ ಸುತ್ತೋಲೆಗಳನ್ನು ಪಾಲನೆ ಮಾಡಬೇಕು, ಸರ್ಕಾರದ ನಿರ್ದೇಶನದಂತೆ ಡಿಜೆ ಸಂಪೂರ್ಣ ನಿಷೇಧ ಮಾಡಲಾಗಿದೆ.ಡಿಜೆ ಬಿಡಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯ ಮಾಡಿ, ಅದೇ ಗಣೇಶ್ ಚತುರ್ಥಿ ವೇದಿಕೆಯಲ್ಲಿ ಪ್ರತಿಭಾವಂತ ಮಕ್ಕಳಿಗೆ ಸನ್ಮಾನಿಸಿ ನಗರ ಸ್ವಚ್ಛತೆ ಕಾಪಾಡುವ ಪೌರಕಾರ್ಮಿಕರನ್ನು ಸನ್ಮಾನಿಸಿ ಸತ್ಕರಿಸುವುದರ ಮೂಲಕ ಗಣೇಶ ಚತುರ್ಥಿಗೆ ಮೆರಗುತನ್ನಿ ಒಳ್ಳೆ ಒಳ್ಳೆ ಕಾರ್ಯಕ್ರಮಗಳನ್ನು ಮಾಡಿ ಶಾಂತಿ ಕದಡಬೇಡಿ ಎಂದು ಹೇಳಿದರು.

ಶನಿವಾರದಿಂದ ನಗರಸಭೆ ಕಚೇರಿಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ತಂಡ ಇರುತ್ತದೆ ಹೀಗಾಗಿ ಗಣೇಶ ಕೂರಿಸುವ ಕಮಿಟಿಯವರು ಬಂದು ಅನುಮತಿ ಪಡೆದುಕೊಂಡು ಹೋಗಿ ಎಂದು ಹೇಳಿದರು.

## ಕಾನೂನು ಅರಿವು ನೆರವು ಕಾರ್ಯಕ್ರಮ

### ಕಾನೂನು ಅರಿವು ಪ್ರತಿಯೊಬ್ಬರಿಗೂ ಅಗತ್ಯ-ಕೋಪರ್ಡೆ



**ಚಿಮ್ಮಡ:** ಹೆಣ್ಣಿರಲಿ ಗಂಡಿರಲಿ ಪ್ರತಿಯೊಬ್ಬರೂ ದೇಶದ ಕಾನೂನಿನ ಕುರಿತು ತಿಳುವಳಿಕೆ ಪಡೆದುಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ ಎಂದು ನ್ಯಾಯವಾದಿ ಎಂ. ಎನ್. ಕೋಪರ್ಡೆ ಹೇಳಿದರು.

ಸ್ಥಳೀಯ ಗ್ರಾಮ ಪಂಚಾಯತಿ ಸಭಾ ಭವನದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವಾ ಸಮಿತಿ, ಅಭಿಯೋಜನಾ ಇಲಾಖೆ, ವಕೀಲರ ಸಂಘ, ಖಾಯಂ ಜನತಾ ನ್ಯಾಯಾಲಯ ಬೆಳಗಾವಿ ಹಾಗೂ ಮಧ್ಯಸ್ಥಿಕೆ ಅಭಿಯಾನದ ಸಂಂ-ಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ "ಕಾನೂನು ಅರಿವು ನೆರವು ಕಾರ್ಯಕ್ರಮ"ದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ದುರ್ಬಲರಿಗಾಗಿ ಕಾನೂನು ನೆರವು ಉಚಿತವಾಗಿ ದೊರೆಯುತ್ತಿದ್ದು ಇದರ ಸದುಪಯೋಗ ಪ್ರತಿಯೊಬ್ಬರೂ ಪಡೆಯ ಬೇಕೆಂದರು.

ವಕೀಲೆ ವಿದ್ಯಾರ್ಥಿನಿ ಗ್ರಾಮ ಪಂಚಾಯತ್ ಸದಸ್ಯೆ ಮೇಘಾ ಬಿ. ಪಾಟೀಲ ಮಾತನಾಡಿ ಮಹಿಳೆಯ-ರಿಗೆ ಇರುವ ಕಾನೂನಾತ್ಮಕ ಸೌಲಭ್ಯಗಳು ಹಾಗೂ ಉಚಿತ ಕಾನೂನು ನೆರವು ಪಡೆಯಲು ಬೇಕಾದ ಅರ್ಹತೆಗಳು, ಅನುಸರಿಸಬೇಕಾದ ಕ್ರಮಗಳ ಕುರಿತು ಕಾರ್ಯಕ್ರಮದಲ್ಲಿ ವಿವರಣೆ ನೀಡುವಂತಾಗಬೇಕೆಂದು ಅಭಿಪ್ರಾಯ ಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಬಂಗಾರೆವ್ವ ಜಾಲಿಕಟ್ಟಿ ವಹಿಸಿದ್ದರು. ನ್ಯಾಯವಾದಿ ಮಹಾದೇವ ಕೋಳಿ, ಭಾಸ್ಕರ ಬಡಿಗೇರ, ಪ್ರಕಾಶ ಪಾಟೀಲ, ಬಾಳಪ್ಪ ಗಡೆಪ್ಪನವರ, ಮನೋಜ ಹಟ್ಟಿ, ಬಾಳೇಶ ಬ್ಯಾಕೋಡ, ನಾಗಪ್ಪ ಆಲಕನೂರ, ರಮೇಶ ಮೇತ್ರಿ, ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಪದ್ಮಾವತಿ ಬಜಂತ್ರಿ, ಮಾಜಿ ಅಧ್ಯಕ್ಷೆ ಮಾಲಾ ಮೋಟಗಿ, ಭಾರತಿ ಬರಗಲ್ಲ, ಪ್ರೇಮಾ ಗೋವಿಂದಗೋಳ, ಅರುಣ ಗಾಣಿಗೇರ, ರವಿ ದೊಡವಾಡ, ಹಣಮಂತ ಬಜಂತ್ರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸೇರಿದಂತೆ ನೂರಾರು ಜನ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಉಪಸ್ಥಿತ-ರಿದ್ದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದಾರ ನಿರೂಪಿಸಿ ವಂದಿಸಿದರು.

## ಕೃಷ್ಣಾ ನದಿಯಲ್ಲಿ ಹೆಚ್ಚುತ್ತಿರುವ ನೀರು

### * ಹಿಪ್ಪರಗಿ ಜಲಾಶಯಕ್ಕೆ 1 ಲಕ್ಷ 26 ಸಾವಿರ ಕ್ಯೂಸೆಕ್ ನೀರು



**ರಬಕವಿ-ಬನಹಟ್ಟಿ:** ಕಳೆದ ಹಲವಾರು ದಿನಗಳಿಂದ ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ಕೃಷ್ಣಾ ನದಿಗೆ ನೀರನ್ನು ಬಿಡುತ್ತಿರುವುದರಿಂದ ಬುಧವಾರ ಸಂಜೆ ನದಿಯಲ್ಲಿ ಮತ್ತೆ ನೀರಿನ ಪ್ರಮಾಣ ಹೆಚ್ಚಾಗಿದೆ.

ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಕಳೆದ ಹಲವಾರು ದಿನಗಳಿಂದ ಮಳೆ ಸುರಿಯುತ್ತಿದ್ದು, ಹವಾಮಾನ ಮುನ್ಸೂಚನೆ ಪ್ರಕಾರ ಇನ್ನೂ ಒಂದು ವಾರಗಳ ಕಾಲ ಅಪಾರ ಮಳೆಯಾಗುವ ಸಾಧ್ಯತೆ ಇದ್ದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುವ ಸಾಧ್ಯತೆ ಇದೆ.

ಮಹಾರಾಷ್ಟ್ರದ ಗಡಿ ಭಾಗದಲ್ಲಿರುವ ರಾಜಾಪುರ ಬ್ಯಾರೇಜ್ನಿಂದ ನಿರಂತರವಾಗಿ ನೀರು ಹರಿ ಬಿಡುತ್ತಿರುವುದರಿಂದ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು

ಇಂದು ಬುಧವಾರ ಸಂಜೆ ಸಮೀಪದ ಹಿಪ್ಪರಗಿ ಜಲಾಶಯಕ್ಕೆ 1 ಲಕ್ಷ 26 ಸಾವಿರ ಕ್ಯೂಸೆಕ್ ಹರಿದು ಬರುತ್ತಿದ್ದು, ಇದು ಗುರುವಾರ ಬೆಳಿಗ್ಗೆ 1 ಲಕ್ಷ 80 ಸಾವಿರ ಕ್ಯೂಸೆಕ್ ದಷ್ಟು ಹೆಚ್ಚಾಗಲಿದೆ ಎಂದು ಜಲಾಶಯದ ಮೂಲಗಳು ತಿಳಿಸಿವೆ.

ಕೃಷ್ಣಾ ಜಲಾನಯನ ಪ್ರದೇಶಗಳಾದ ಕೊಯ್ನಾ: 270 ಮಿ.ಮಿ., ನವುಜಾ: 387 ಮಿ.ಮಿ. , ಮಹಾಬಳೇಶ್ವರ: 308 ಮಿ.ಮಿ. ಮಳೆಯಾದ ವರದಿಯಾಗಿದೆ ಎಂದು ಜಮಖಂಡಿಯ ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬಿಡಕರ್ ತಿಳಿಸಿದರು.

# ಕುಳಲಿಯಲ್ಲಿ ವಿಶ್ವ ಶಾಂತಿಗಾಗಿ ಜಪ ಯಜ್ಞ

**ಮುಧೋಳ :** ತಾಲೂಕಿನ ಕುಳಲಿ ಗ್ರಾಮದ ಸಿದ್ದಲಿಂಗ ಯತಿರಾಜರ ಹಾಗೂ ಶಾಂಭವಿ ಅಂಬಾಮಠದಲ್ಲಿ ಆಗಸ್ಟ್ 24 ರಂದು ವಿಶ್ವ ಶಾಂತಿಗಾಗಿ ಜಪ ಯಜ್ಞ ಕಾರ್ಯಕ್ರಮವನ್ನು ಮಠದ ಪೂಜ್ಯರಾದ ಸದಾಶಿವ ಅಜ್ಜನವರ ಸಾನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹಾದೇವ ಮೀಸಿ ತಿಳಿಸಿದ್ದಾರೆ. ಬೆಳಿಗ್ಗೆ 9 ಗಂಟೆಗೆ ಗ್ರಾಮ ದೇವತೆ ದುಗಾ9ದೇವಿಯ ಪಲ್ಲಕ್ಕಿ ಉತ್ಸವ ಜರುಗುವದು.

ಮಧ್ಯಾಹ್ನ ಒಂದು ಗಂಟೆಗೆ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ನಂತರ ಗುರುನಾಥಾರೂಢರ ಮಠದ ಓಂಕಾರ ಸ್ವರೂಪಿ ದಾಸೋಹ ಮೂರ್ತಿ ಶಂಕರಾನಂದ ಶ್ರೀಗಳ ಮತ್ತು ಬಳ್ಳೂರಿನ ಮಾತೋಶ್ರೀ ಕ್ಷೀರಮ್ಮ ತಾಯಿಯವರ ಅಮೃತ ಹಸ್ತದಿಂದ ಲಿಂಗಪೂಜೆ,

ಮಾತಾ ಶಾಂಭವಿ ಪೂಜಾ ಕಾರ್ಯಕ್ರಮ ಜರುಗುವುದು. ಮಧ್ಯಾಹ್ನ ಮೂರು ಗಂಟೆಗೆ ಸದ್ಗುರು ಭೀಮಾವಧೂತರ ಮಠದ ಪಂಚಾಕ್ಷರಿ ಶ್ರೀಗಳ ಸಮ್ಮುಖದಲ್ಲಿ ವೀರಭದ್ರೇಶ್ವರ ಮಠದ ಈರಯ್ಯ ಶ್ರೀಗಳು, ರಾಂಪೂರ ನೀಲಕಂಠೇಶ್ವರ ಮಠದ ಬಸವರಾಜ ಸ್ವಾಮಿಗಳು, ಮುಗಳಖೋಡದ ಸಿದ್ಧಾರೂಢ ಭಾರತಿ ಆಶ್ರಮದ ಶರಣಬಸವ ಶಾಸ್ತ್ರಿಗಳು, ಮಧುರಖಂಡಿಯ ಬಸಯ್ಯ ಸ್ವಾಮಿಗಳು, ನಿಂಗಾಪೂರದ ಜಡಿಸಿದ್ದೇಶ್ವರ ಮಠದ ಬಸವರಾಜ ಸ್ವಾಮಿಗಳು, ಮಹಾಲಿಂಗೇಶ್ವರ ದೇವರ ಅರ್ಚಕರಾದ ಕಾಡಪ್ಪ ಶರಣರು, ಈರಪ್ಪ ತಳಪಟ್ಟಿ ಶರಣರಿಂದ ಪ್ರವಚನ ನಡೆಯುವದು. ಲಿಂಗೈಕ್ಯ ಚಂಪಮ್ಮ ತಾಯಿಯವರ ಹಾಗೂ ನಂಜುಂಡೇಶ್ವರ ಶಿವಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಮುತ್ತಪ್ಪ ಬನಾಜಗೋಳ ಸಂಗಡಿಗರು ಮತ್ತು ಭೀಮಾವಧೂತ ಭಜನಾ ಮಂಡಳಿಯಿಂದ ಭಜನಾ ಸೇವೆ ಜರುಗುವದು. ನಂತರ ಮಂಗಲದೊಂದಿಗೆ ಮಹಾಪ್ರಸಾದ ಜರುಗುವುದು.

# ದೇವರಾಜು ಅರಸು ಜನಪರ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಿ

**ರಬಕವಿ–ಬನಹಟ್ಟಿ :** ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಸಾಮಾಜಿಕ ಕ್ರಾಂತಿಯ ಹರಿಕಾರ ಡಿ. ದೇವರಾಜು ಅರಸರು ಜಾರಿಗೆ ತಂದ ಯೋಜನೆಗಳನ್ನು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಸದುಪಯೋಗ ಪಡಿಸಿಕೊಂಡು ಉತ್ತಮ ಬದುಕು ಸಾಗಿಸಬೇಕು ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.



ಅವರು ಬುಧವಾರ ರಬಕವಿ ಬನಹಟ್ಟಿಯ ದೇವರಾಜು ಅರಸು

ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಡಿ. ದೇವರಾಜು ಅರಸು ಅವರ 110 ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿನಿಯರು ವಸತಿ ನಿಲಯದಲ್ಲಿರುವ ಸೌಲಭ್ಯಗಳನ್ನು ಬಳಸಿಕೊಂಡು, ಚೆನ್ನಾಗಿ ಅಧ್ಯಯನ ಮಾಡಿ ಸಮಾಜದ ಮುಖ್ಯ ವಾಹಿನಿಗೆ ಬರಬೇಕು. ಜೀವನದಲ್ಲಿ ಉನ್ನತವಾದ ಗುರಿಯನ್ನು ಹೊಂದಿರಬೇಕು ಎಂದು ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ ಮಾತನಾಡಿ, ಇಂದಿನ ಸಮಾಜ ಪ್ರಗತಿಯತ್ತ ಸಾಗಲು ಅರಸರು ಜಾರಿಗೆ ತಂದ ಜನಪರ ಯೋಜನೆಗಳೆ ಕಾರಣವಾಗಿವೆ ಎಂದರು.

ರಬಕವಿ ಬನಹಟ್ಟಿ ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ ಡಿ. ದೇವರಾಜ್ ಅರಸರ ಭಾವ ಚಿತ್ರಕ್ಕೆ ಪೂಜೆ ನೆರವೇರಿಸಿ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮಕ್ಕಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ನಗರಸಭೆಯ ಅಧಿಕಾರಿ ಎಸ್. ಎಂ. ಬಬಲಾದಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ, ವಸತಿ ನಿಲಯದ ಮೇಲ್ವಿಚಾರಕ ಮಾರುತಿ ದೊಡ್ಡಮನಿ, ಶಿವಾನಂದ ಮಹಾಬಲ, ಎಂ. ಪಿ. ಜುಂಝುರವಾಡ, ಶಿವಲೀಲಾ ಸಾಬೋಜಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಊರಿನ ಹಿತಕ್ಕಾಗಿ ಸ್ವಹಿತ ಬಿಡಬೇಕು: ಲಮಾಣಿ



**ಜಮಖಂಡಿ :** ಊರಿನ ಹಿತಕ್ಕಾಗಿ ಸ್ವಹಿತ, ಕುಟುಂಬದ ಹಿತ ಬಿಡಬೇಕು. ದೇಶದ ಹಿತಕ್ಕಾಗಿ ಊರಿನ ಹಿತ ತ್ಯಜಿಸಬೇಕು. ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡುತ್ತ ನಿಸ್ವಾರ್ಥ ಜೀವನ ಸಾಗಿಸಬೇಕು ಎಂದು ಬನಶಂಕರಿ ತೋಟದ ಶಾಲೆಯ ಮುಖ್ಯ ಶಿಕ್ಷಕ, ಸಾಹಿತಿ ಶಂಕರ ಲಮಾಣಿ ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗಿದ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ ಗಾರಗೆ ತೋಟದ ವಿಠ್ಠಲ ಮಂದಿರದಲ್ಲಿ ಮಂಗಳವಾರ ಸಂಜೆ ನಡೆದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಬಸವಣ್ಣನವರ ವಚನ ಆಧಾರಿತ 'ಸಕಲ ಜೀವಾತ್ಮರಿಗೂ ಲೇಸನೆ ಬಯಸುವ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ದುಡಿದು ಸಂಪಾದಿಸಿದರಲ್ಲಿ ನಾಲ್ಕು ಭಾಗ ಮಾಡಿ ಕನಿಷ್ಠ ಒಂದು ಭಾಗವನ್ನಾದರೂ ಸತ್ಕಾರ್ಯಕ್ಕೆ ದಾಸೋಹ ಮಾಡಬೇಕು. ಅನ್ನ–ಆಹಾರ ನೀಡಿದ ಸಮಾಜದ ಋಣವನ್ನು ಸ್ವಲ್ಪವಾದರೂ ಕಡಿಮೆ ಮಾಡಿಕೊಳ್ಳಬೇಕು. ಪಡೆದುಕೊಳ್ಳಲು ಕಳೆದುಕೊಳ್ಳಬೇಕು ಎಂದರು.

ಓಲೆಮಠದ ಆನಂದ ದೇವರು ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿ, ನಾವು ಬಾಡಿಗೆದಾರರಾಗಿ ಭೂಮಿಗೆ ಬಂದಿದ್ದೇವೆ.

ನಾವು ಯಾತ್ರಿಕರು. ನಾವು ವಾಸಿಸುವ ಮನೆ ಭಗವಂತನಿಗೆ ಸೇರಿದ್ದು ಎಂಬ ಭಾವನೆಯಿಂದ ಬದುಕು ಸಾಗಿಸಬೇಕು ಎಂದು ಆಶೀರ್ವಚನ ನೀಡಿದರು.

ಸಕಲ ಜೀವಿಗಳಿಗೆ ದಯೆ ತೋರಿದರೆ ನಾವು ಭಗವಂತನಿಗೆ ಬಾಡಿಗೆ ಹಣ ಸಂದಾಯ ಮಾಡಿದಂತೆ. ಭಗವಂತ ಒಲಿಯ ಬೇಕಾದರೆ ನಿತ್ಯ ಭಗವಂತನ ನಾಮಸ್ಮರಣೆ ಮಾಡಬೇಕು. ಲಿಂಗಪೂಜೆ ಮಾಡಬೇಕು. ಲಿಂಗವೊಂದೆ ನಮ್ಮ ಶಾಶ್ವತ ಆಸ್ತಿ ಎಂದರು.

ಬಸಪ್ಪ ಸವಣೂರ, ಸಗರೆಪ್ಪ ನ್ಯಾಮಗೌಡ ಉಪಸ್ಥಿತರಿದ್ದರು. ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು. ಸಂಜು ಯಮಗಾರ ಸ್ವಾಗತಿಸಿದರು. ಎಸ್ಡಿಎಂಸಿ ಅಧ್ಯಕ್ಷ ಬಸವರಾಜ ಚೌಧರಿ ನಿರೂಪಿಸಿದರು.

# ಹಳ್ಳಿಗಳ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿ ಅಸಾಧ್ಯ–ರಾಜೀವ ಆಚಾರ್ಯ

**ಮುಧೋಳ :** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಗ್ರಾಮೀಣ ಭಾಗದ ಲಕ್ಷಾಂತರ ಜನರು ನೆಮ್ಮದಿಯ ಬದುಕನ್ನು ಕಟ್ಟಿಕೊಂಡಿದ್ದಾರೆ. ಇವತ್ತು ಗ್ರಾಮೀಣ ಭಾಗದ ಜನರಿಗೆ ಧರ್ಮಸ್ಥಳದ ಯೋಜನೆಗಳು ದಾರಿ ದೀಪವಾಗಿವೆ ಎಂದು ತಾಲೂಕಾ ಯೋಜನಾಧಿಕಾರಿಗಳಾದ ರಾಜೀವ್ ಆಚಾರ್ಯರು ಅಭಿಪ್ರಾಯಪಟ್ಟರು.



ಅವರು ಮುಧೋಳ ತಾಲೂಕಿನ ಮುಗಳಖೋಡ ಗ್ರಾಮದ ಪರಮಾನಂದ ದೇವಸ್ಥಾನದಲ್ಲಿ ಜರುಗಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಒಕ್ಕೂಟ ಸಭೆಯನ್ನು ಉದ್ಘಾಟಿಸಿ ಒಕ್ಕೂಟದ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರ ಕಲ್ಪನೆ ಕನಸು ಗ್ರಾಮಾಂತರ ಪ್ರದೇಶದ ಜನರಿಗೆ ಅವರ ಯೋಜನೆಗಳು ದಾರಿದೀಪವಾಗಿದೆ.

ಸ್ವಸಹಾಯ ಸಂಘಗಳ ಸ್ಥಾಪನೆ, ಕಿರು ಆರ್ಥಿಕ ವ್ಯವಹಾರ, ಯುವಕರಿಗೆ ಉದ್ಯೋಗ, ಅಲ್ಪಕಾಲಕ್ಕೆ ಹೆಚ್ಚು ಆದಾಯ ಬರುವಂತಹ ಹೈನುಗಾರಿಕೆ ಮುಂತಾದ ಯೋಜನೆಗಳು, ಮದ್ಯಪಾನ ಬಿಡಿಸುವಂತಹ ಮಹತ್ತರ ಯೋಜನೆ ಇವತ್ತು ನಾಡಿನಾದ್ಯಂತ ಹಲವಾರು ಕುಟುಂಬಗಳನ್ನು ಬದುಕಿಸಿದೆ. ಹೀಗಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಜ್ಞಾನವಿಕಾಸ ಕಾರ್ಯಕ್ರಮದಿಂದ ಗ್ರಾಮೀಣ ಭಾಗದ ಮಹಿಳೆಯರ ಸಬಲೀಕರಣಕ್ಕಾಗಿ ನೀಡಲಾಗುತ್ತಿದೆ. ಗ್ರಾಮಾಂತರದ ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಲು ಹೇಳಿದರು.

ಲೋಕನಾಯಕಿ ಸಂಸ್ಥೆಯ ಅಧ್ಯಕ್ಷೆ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರತಿನಿಧಿಗಳಾದ ಎಲ್. ಶ್ಯಾಮಲಾ ಅವರು ಮಾತನಾಡಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಮ್ಮರವಾಗಿ ಬೆಳೆದ ಧರ್ಮಸ್ಥಳ ಕ್ಷೇತ್ರದ ಹೆಸರು ಕೆಡಿಸಲು ವ್ಯವಸ್ಥಿತವಾದ ಅಪಪ್ರಚಾರ ನಡೆಯುತ್ತಿದೆ. ನಾವೆಲ್ಲ ಅದನ್ನು ಒಕ್ಕೊರಲಿನಿಂದ ಖಂಡಿಸಬೇಕು. ಧರ್ಮಸ್ಥಳ ಸಂಸ್ಥೆಯಿಂದ ಯಾವುದೇ ಯೋಜನೆಗಳನ್ನು ಪಡೆಯುವ ಹಂತದಲ್ಲಿ ಯಾರಿಗೂ ಕೂಡ ಆಸೆ ಆಮಿಷಗಳನ್ನು ಒಡ್ಡುವಂತಹ ಪ್ರಯತ್ನವನ್ನು ಸದಸ್ಯರು ಮಾಡಕೂಡದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನೂರಾರು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮವು ವಿಶೇಷವಾಗಿ ಜರುಗಿತು. ಕೃಷಿ ಅಧಿಕಾರಿ ಪ್ರವೀಣ ಹಾಗೂ ಮಂಜುಳಾ ಮುಚ್ಚಂಡಿ, ಸೋನವ್ವ ತೆಳಗೇರಿ, ಭಾರತಿ ಮಟಗಾರ, ಸುಜಾತಾ ಒಡೆಯರ್ ಉಪಸ್ಥಿತರಿದ್ದರು.

# ಅಪ್ರಿಯವಾದ ಸತ್ಯವನ್ನು ಹೇಳಬಾರದು: ಅವರವಾಡಮಠ



**ಜಮಖಂಡಿ :** ತೆಗಳಿ, ಹೀಯಾಳಿಸಿ, ನಿಂದಿಸಿ, ಕುಹಕ ಮಾತುಗಳನ್ನಾಡಿ ಇನ್ನೊಬ್ಬರ ಮನವನ್ನು ನೋಯಿಸಬಾರದು. ಅಪ್ರಿಯವಾದ ಸತ್ಯಗಳನ್ನು ಹೇಳಬಾರದು ಎಂದು ಪ್ರೌಢಶಾಲೆಯ ನಿವೃತ್ತ ಮುಖ್ಯಶಿಕ್ಷಕ ಗುರುಸಿದ್ಧಯ್ಯ ಅವರವಾಡಮಠ ಹೇಳಿದರು. ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗುತ್ತಿರುವ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ ಗುಂಡಾಳೇಶ್ವರ ದೇವಸ್ಥಾನದಲ್ಲಿ ಸೋಮವಾರ ಸಂಜೆ ನಡೆದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಸಿದ್ಧರಾಮೇಶ್ವರ ವಚನ ಆಧಾರಿತ 'ಒಬ್ಬರ ಮನವ ನೋಯಿಸಿ ...' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ನಮ್ಮದಲ್ಲದ್ದನ್ನು ನಮ್ಮದು ಎಂದಾಗ ಕಷ್ಟಗಳು ಬರುತ್ತವೆ. ನಾಲಿಗೆ ಒಳ್ಳೆಯದಾಗಿರಬೇಕು. ಇನ್ನೊಬ್ಬರ ಮನಸ್ಸನ್ನು ಘಾಸಿಗೊಳಿಸಬಾರದು ಎಂದರು.

ಓಲೆಮಠದ ಆನಂದ ದೇವರು ಶ್ರೀಗಳು ಸಾನಿಧ್ಯವಹಿಸಿ ಮಾತನಾಡಿ, ಕಷ್ಟ ಯಾರನ್ನೂ ಬಿಟ್ಟಿಲ್ಲ. ದೇವರನ್ನೂ ಬಿಟ್ಟಿಲ್ಲ. ಪರಮಾತ್ಮನೂ ವಿಷ ಕುಡಿಯುವ ಪ್ರಸಂಗ ಬಂದಿತ್ತು. ಜೀವನ ಅನ್ನುವುದು ಜೋಕಾಲಿ ಇದ್ದಂತೆ. ಸುಖ–ದುಃಖಗಳ ಸಮ್ಮಿಲನವೇ ಜೀವನ ಎಂದು ಆಶೀರ್ವಚನ ನೀಡಿದರು. ದೇವರು ಕೊಟ್ಟು–ಕಸಿದು ನೋಡುತ್ತಾನೆ. ಕೊಟ್ಟಾಗ ಹಿಗ್ಗದೆ, ಕಸಿದಾಗ ಕುಗ್ಗದೆ ಸಮಚಿತ್ತದಿಂದ ಇರಬೇಕು. ಅವಮಾನ, ಹೀಯಾಳಿಕೆ ಇರುವುದು ಲೋಕದ ಸತ್ಯ. ಆದರೆ, ಬೆಂಕಿ ಹಚ್ಚುವ ಅಥವಾ ಕತ್ತರಿಯ ಕೆಲಸ ಮಾಡದೆ ಎಲ್ಲರನ್ನೂ ಒಂದುಗೂಡಿಸಲು ಸೂಜಿಯಂತೆ ವರ್ತಿಸಬೇಕು ಎಂದರು.

ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು. ಸಂಗಪ್ಪ ಗಡ್ಡಿ, ನರಸಪ್ಪ ತೇಲಿ ಮಹಾಪ್ರಸಾದದ ವ್ಯವಸ್ಥೆ ಮಾಡಿದ್ದರು. ತುಳಜಪ್ಪ ಜಾಲಿಬೇರಿ ಉಪಸ್ಥಿತರಿದ್ದರು. ಅಯ್ಯಪ್ಪಗೌಡ ಪಾಟೀಲ ನಿರೂಪಿಸಿದರು.

# ವಿಜಯಪುರ ಜಿಲ್ಲೆಯಲ್ಲಿ 5,594 ಹೆಕ್ಟೇರ್ ಬೆಳೆ ಹಾನಿ: ಜಿಲ್ಲಾಧಿಕಾರಿ



**ವಿಜಯಪುರ :** ಜಿಲ್ಲೆಯಲ್ಲಿ ಮಳೆಯಿಂದ ಪ್ರಾಥಮಿಕ ವರದಿಯಂತೆ 5322.19 ಹೆಕ್ಟೇರ್ ಕೃಷಿ ಬೆಳೆ ಹಾಗೂ 272.20 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ ಜಿಲ್ಲಾಧಿಕಾರಿ ಡಾ.ಆನಂದ್ ಕೆ. ತಿಳಿಸಿದ್ದಾರೆ.

ಬೆಳೆ ಹಾನಿ ಜಂಟಿ ಸಮೀಕ್ಷಾ ತಂಡವನ್ನು ರಚಿಸಿ ಶೇ 80 ರಷ್ಟು ಸಮೀಕ್ಷೆ ಕೈಗೊಂಡಿದ್ದು, ಕೂಡಲೇ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದ್ದಾರೆ.

ಜಿಲ್ಲೆಯಲ್ಲಿ ಆ.5ರಿಂದ ಈವರೆಗೆ ಮಳೆಯಿಂದ 2 ಜಾನುವಾರು ಹಾಗೂ 104 ಮನೆಗಳ ಗೃಹೋಪಯೋಗಿ ವಸ್ತುಗಳು ಹಾನಿಯಾಗಿದ್ದು, ಪರಿಹಾರವನ್ನು ವಿತರಿಸಲಾಗಿದೆ. ಭಾಗಶಃ ಹಾನಿಯಾದ 213 ಮನೆಗಳ ಪೈಕಿ ಜಂಟಿ ಸಮೀಕ್ಷಾ ವರದಿಯಂತೆ ಈಗಾಗಲೇ 160 ಮನೆಗಳಿಗೆ ಪರಿಹಾರಧನ ನೀಡಲಾಗಿದೆ. ಬಾಕಿ ಉಳಿದ 53 ಭಾಗಶಃ ಮನೆಗಳು ಇತ್ತೀಚಿನ 2–3 ದಿನಗಳಲ್ಲಿ ಹಾನಿಯಾಗಿದ್ದು, ಮನೆ ಹಾನಿಗೆ ಪರಿಹಾರ ವಿತರಿಸಲು ಜಂಟಿ ಸಮೀಕ್ಷಾ ಕಾರ್ಯ ಪ್ರಗತಿಯಲ್ಲಿದೆ ಎಂದು ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಏಪ್ರಿಲ್ 1 ರಿಂದ ಮೇ 31 ರ ವರೆಗೆ 9 ಮಾನವ ಜೀವಹಾನಿ, 65 ಜಾನುವಾರು ಜೀವಹಾನಿ, 110 ಭಾಗಶಃ ಮನೆಗಳ ಹಾನಿ ಹಾಗೂ 70 ಮನೆಗಳ ಗೃಹೋಪಯೋಗಿ ವಸ್ತುಗಳು ಹಾನಿಯಾಗಿದ್ದು, ಇವುಗಳಿಗೆ ಎಸ್‌ಡಿಆರ್‌ಎಫ್–ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಈಗಾಗಲೇ ಪರಿಹಾರವನ್ನು ವಿತರಿಸಲಾಗಿದೆ ಎಂದರು.

147.40 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಗೆ ಸಂಬಂಧಿಸಿದಂತೆ 218 ಫಲಾನುಭವಿಗಳಿಗೆ ?12.81 ಲಕ್ಷ ಪರಿಹಾರವನ್ನು ವಿತರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಶಿಕ್ಷಣ ಎಂದರೆ ಬರೀಪುಸ್ತಕದ ಜ್ಞಾನವನ್ನು ಬೋಧಿಸುವುದಲ್ಲ: ಬಾಬರ ಅಲಿ

**ವಿಜಯಪುರ :** ಶಿಕ್ಷಣ ಎಂದರೆ ಬರೀ ಪುಸ್ತಕದಜ್ಞಾನವನ್ನು ತಿಳಿಸುವುದಲ್ಲ. ಬದಲಿಗೆ ಮಾನವೀಯ ಮೌಲ್ಯಗಳನ್ನು ಹಾಗೂ ಸಾಮಾಜಿಕ ಚಿಂತನೆಗಳನ್ನು ಬಿತ್ತಿ, ಸಮಾಜದಅಭಿವೃದ್ಧಿಗಾಗಿ ಮಕ್ಕಳನ್ನು ತಯಾರಿಸುವುದಾಗಿದೆಎಂದು ವಿಶ್ವದಅತೀಕಿರಿಯ ಮುಖ್ಯಗುರುವೆಂದು ಗುರುತಿಸಿಕೊಂಡಿರುವ ಪಶ್ಚಿಮ ಬಂಗಾಳದ ಬಾಬರ ಅಲಿ ಹೇಳಿದರು.




ನಗರದಎಕ್ಸಲಂಟ ವಿಜ್ಞಾನ ಪದವಿ ಪೂರ್ವಕಾಲೇಜಿನಲ್ಲಿಆಯೋಜಿಸಲಾಗಿದ್ದ ವಿಶೇಷ ಉಪನ್ಯಾಸಕಾರ್ಯಕ್ರಮದ ಮುಖ್ಯ ವಕ್ತಾರರಾಗಿ ಆಗಮಿಸಿ ಮಾತನಾಡಿದಅವರು; ಸಮಾಜಕ್ಕೆ ಒಳ್ಳೆಯದನ್ನು ಮಾಡಿದರೆ ಆ ದೇವರು ನಮಗೆ ಒಳಿತನ್ನು ಮಾಡುತ್ತಾನೆ. ಆದರೆ ಮಾಡುವಕಾರ್ಯದಲ್ಲಿಆತ್ಮತೃಪ್ತಿಇರಬೇಕು. ಯಾವುದೇ ಕಾರ್ಯವಾಗಲಿ ಉತ್ಸಾಹರಹಿತವಾಗಿ ಮಾಡಿದರೆ ಅದರಲ್ಲಿ ಯಾವುದೇಹುರುಳಿರುವುದಿಲ್ಲ. ಅದನ್ನುಚಿಕ್ಕ ವಯಸ್ಸಿನಿಂದಲೂ ಕಂಡುಕೊಂಡಿದ್ದ ನಾನು ಅದೇಉತ್ಸಾಹದೊಂದಿಗೆ ಚಿಕ್ಕವಯಸ್ಸಿನಲ್ಲಿಯೇ ಬೋಧನಾಕಾರ್ಯ ಶುರು ಮಾಡಿದೆ.

ಅದರಜೊತೆಯಲ್ಲಿ ಬಂಗಾಳದಲ್ಲಿರುವ ಬಡ ಮಕ್ಕಳ ಶಿಕ್ಷಣಕ್ಕೆ ನಾನು ನೆರವಾಗಬೇಕುಎಂದು ಹೊರಟಿದ್ದರ ಫಲವಾಗಿ ಇಂದು ಇಷ್ಟು ಮಹತ್ವಾಕಾಂಕ್ಷೆಯುಳ್ಳ ಕಾರ್ಯವನ್ನು ಮಾಡುವಲ್ಲಿ ಯಶಸ್ವಿಯಾಗಿದ್ದೇನೆ ಎಂದು ಹೇಳಿದರು.

ಒಂದೊಳ್ಳೆ ಕಾರ್ಯವನ್ನು ಮಾಡುವಾಗ ಸಮಾಜದಲ್ಲಿ ಸಾಕಷ್ಟು ಅಡ್ಡಿ ಆತಂಕಗಳು ಎದುರಾಗುತ್ತವೆ.


ಹಾಗೆಂದು ಅವುಗಳಿಗೆ ಹೆದರಿ ಹಿಂದೆ ಹೆಜ್ಜೆಇಡುವುದಕ್ಕಾಗುತ್ತದೆಯೇ ಖಂಡಿತಇಲ್ಲ. ಎದುರು ಬರುವ ಅಡ್ಡಿಗಳನ್ನು ಅಡ್ಡಗಟ್ಟಿದಾಟಿದಾಗಮಾತ್ರ ನಿಶ್ಚಿತ ಗುರಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ.

ಆದರೆಯಾವುದೇ ಹಂತದಲ್ಲಿಯೂ ತಾಳ್ಮೆ ಕಳೆದುಕೊಳ್ಳಬಾರದು. ಎಲ್ಲಿ ತಾಳ್ಮೆ, ಶಾಂತಿ ಹಾಗೂ ಸಮರ್ಪಣಾ ಭಾವವಿರುತ್ತದೆಯೋಅಲ್ಲಿ ಮಾಡುವ ಕಾರ್ಯಗಳು ಯಶಸ್ಸಿನ ದಾರಿಯಲ್ಲಿ ಸಾಗುತ್ತವೆ. ಹೀಗಾಗಿ ವಿದ್ಯಾರ್ಥಿಗಳು ಸಹಇಂತಹ ಚಿಂತನೆಗಳನ್ನು ಅಳವಡಿಸಿಕೊಂಡು ಹೆಜ್ಜೆ ಹಾಕಬೇಕು ಎಂದುಕರೆ ನೀಡಿದರು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಎಕ್ಸಲಂಟ ವಿಜ್ಞಾನ ಪದವಿ ಪೂರ್ವಕಾಲೇಜಿನ ಪ್ರಾಚಾರ್ಯ ಶ್ರೀಕಾಂತ ಕೆ.ಎಸ್; ಶಿಸ್ತು ಎನ್ನುವುದು ಯಶಸ್ಸಿನ ರಾಜಮಾರ್ಗವಾಗಿದೆ. ಶಿಸ್ತನ್ನು ಅಳವಡಿಸಿಕೊಂಡರೆ ಬದುಕಿನಲ್ಲಿಯಶಸ್ಸು ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಅದಕ್ಕೆಉತ್ತಮಉದಾಹರಣೆಯಾಗಿ ಬಾಬರ ಅಲಿ ನಮ್ಮೆದುರು ಸಾಕ್ಷಿಯಾಗಿ ನಿಂತಿದ್ದಾರೆ. ಈ ರೀತಿಉತ್ಸಾಹ ಹಾಗೂ ಆತ್ಮ ಸಮರ್ಪಣಾ ಭಾವ ಹೊಂದಿರುವ ಬಾಬರಅಲಿಯಂತಹ ವ್ಯಕ್ತಿಗಳು ಪ್ರತಿರಾಜ್ಯಕ್ಕೊಬ್ಬರಿದ್ದರೆ ಆ ರಾಜ್ಯದಲ್ಲಿನ ಬಡತನ ಹಾಗೂ ಅನಕ್ಷರತೆ ಎನ್ನುವುದು ನೂರಕ್ಕೆ ನೂರರಷ್ಟುಕಡಿಮೆಯಾಗುತ್ತದೆ. ಅದರಜೊತೆಯಲ್ಲಿಹೋರಾಟದಹಾದಿಯಲ್ಲಿ ಹೇಗೆ ಗೆದ್ದು ಬೀಗಬೇಕು ಎನ್ನುವುದು ಯುವಜನತೆಗೆಅರ್ಥವಾಗುತ್ತದೆ. ಇಂದುಅವರು ಹೇಳಿದ ವಿಚಾರಗಳು ಮುಂದಿನ ದಿನಗಳಲ್ಲಿ ಕೇವಲ ವಿದ್ಯಾರ್ಥಿಗಳಿಗಷ್ಟೇ ಅಲ್ಲ ಶಿಕ್ಷಕರಿಗೂ ಕೂಡ ನೆರವಾಗುತ್ತದೆಎಂದು ಹೇಳಿದರು.

ಕಾರ್ಯಕ್ರಮವನ್ನುದ್ದೇಶಿಸಿ ಉಪಪ್ರಾಚಾರ್ಯ ಮಂಜುನಾಥಜುನಗೊಂಡ ಮಾತನಾಡಿದರು. ಆಂಗ್ಲ ವಿಭಾಗದ ಮುಖ್ಯಸ್ಥೆ ಶ್ರದ್ಧಾಜಾಧವ ಪ್ರಸ್ತಾವಿಕವಾಗಿ ಮಾತನಾಡಿದರು. ಆಂಗ್ಲಉಪನ್ಯಾಸಕ ಮುಸ್ತಾಕ ಮಲಘಾಣ ನಿರೂಪಿಸಿದರು. ಬಂಜಾರಾಕಾಲೇಜಿನ ಪ್ರಾಚಾರ್ಯಎಸ್.ಎಸ್.ತೆನಿಹಳ್ಳಿ, ದಿಕ್ಸೂಚಿಕೋಚಿಂಗ್‌ಕ್ಲಾಸ್‌ನ ಮುಖ್ಯಸ್ಥರಾದ ಪ್ರಕಾಶ ಬಿರಾದಾರ ಸೇರಿದಂತೆಕಾಲೇಜಿನಎಲ್ಲಉಪನ್ಯಾಸಕ ವರ್ಗದವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಂತರದಲ್ಲಿ ವಿದ್ಯಾರ್ಥಿಗಳಿಂದ ಸಂವಾದಕಾರ್ಯಕ್ರಮಜರುಗಿತು.

## ಡಿ. ದೇವರಾಜ ಅರಸು–ಸಾಮಾಜಿಕ ಪರಿವರ್ತನೆಯ ಹರಿಕಾರ



ಸ್ವತಂತ್ರ ಭಾರತದ ಇತಿಹಾಸದಲ್ಲಿ 70 ರ ದಶಕವು ಒಂದು ಮಹತ್ವದ ಘಟ್ಟ ಎನ್ನಬಹುದು. ಕರ್ನಾಟಕದ ಪಾಲಿಗೆ ಸಾಮಾಜಿಕ ಬದಲಾವಣೆಯ ಪರ್ವಕಾಲವಾಗಿತ್ತು. ಈ ಸಾಮಾಜಿಕ ಬದಲಾವಣೆಯ ಹಿಂದಿರುವ ಕರ್ತೃತ್ವ ಶಕ್ತಿಯೇ ಹಿಂದುಳಿದ ವರ್ಗಗಳ ಧೀಮಂತ ನಾಯಕ, ಸಾಮಾಜಿಕ ಪರಿವರ್ತನೆ ಹರಿಕಾರ, ಕರ್ನಾಟಕದ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಎಂದರೆ ತಪ್ಪಾಗಲಿಕ್ಕಿಲ್ಲ.

1972 ರಿಂದ 1977 ಮತ್ತು 1978 ರಿಂದ 1979ರ ವರೆಗೆ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ರಾಜಕೀಯ ಸಂಸ್ಕೃತಿಯನ್ನು ವಿನೂತನ ರೀತಿಯಲ್ಲಿ ರೂಪಿಸಿ,ಅವಕಾಶ ವಂಚಿತ ಸಮುದಾಯಗಳ ಸಬಲೀಕರಣಕ್ಕೆ ಹಾಗೂ ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ದೇವರಾಜ ಅರಸರು ಹಾಕಿದ ಭದ್ರ ಬುನಾದಿ ರಾಷ್ಟ್ರದ ಗಮನ ಸೆಳೆದಿತ್ತು. ದೇವರಾಜ ಅರಸರು ಜಾರಿಗೆ ತಂದ ಭೂಸುಧಾರಣಾ ಕಾಯ್ದೆ,ಜಿತಮುಕ್ತಸಮಾಜನಿರ್ಮಾಣ,ಮಲಹೊರುವ ಪದ್ಧತಿ ನೀಷೇಧ ಕಾಯ್ದೆ, ಭಾಗ್ಯ ಜ್ಯೋತಿ ಯೋಜನೆ , ಹಿಂದುಳಿದ ವರ್ಗಗಳಿಗೆ ಕಲ್ಪಿಸಿದ ಮೀಸಲಾತಿ, ಋಣಮುಕ್ತ ಕಾಯ್ದೆ, ಮಲ ಹೊರುವ ಪದ್ಧತಿ ನಿಷೇಧ ಕಾಯ್ದೆ ಹಾಗೂ ಕನ್ನಡ ನಾಡಿಗೆ ಕರ್ನಾಟಕವೆಂದು ನಾಮಕರಣ ಮಾಡಿದ್ದು ಮುಂತಾದ ಸಮಾಜ ಮುಖಿ ಕಾರ್ಯಗಳಿಂದ ಸಾಮಾಜಿಕ ಪರಿವರ್ತನೆಯ ಹರಿಕಾರರೆಂದು ರಾಜ್ಯದಲ್ಲಿ ಹೆಸರಾದರು.

ಶೈಕ್ಷಣಿಕ ಹಾಗೂ ಔದ್ಯೋಗಿಕ ಅವಕಾಶದ ಹೆಬ್ಬಾಗಿಲನ್ನು ತೆರೆಯದ ಹೊರತು ನಾಡು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲವೆಂಬುದು ಅರಸರ ನಂಬಿಕೆಯಾಗಿತ್ತು. ಹಾವನೂರು ಆಯೋಗದ ಶಿಫಾರಸ್ಸಿನ ಅನ್ವಯ, ನೀಡಲಾದ ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿಯು ಕೇಂದ್ರದಲ್ಲಿ ಪ್ರಧಾನಿ ವಿ.ಪಿ.ಸಿಂಗ್ ರವರು ಜಾರಿಗೊಳಿಸಿದ ಮಂಡಲ ಆಯೋಗಕ್ಕೆ ಮಾದರಿಯಾಯಿತು. ಕೃಷಿಭೂಮಿಯಲ್ಲಿ ಹಲವಾರು ತಲೆಮಾರುಗಳಿಂದ ಶೋಷಣೆಗೊಳಗಾಗಿದ್ದ ಸುಮಾರು 65,000 ಜೀತದಾಳುಗಳನ್ನು ಬಂಧಮುಕ್ತಗೊಳಿಸಲಾಯಿತು. ಋಣಮುಕ್ತ ಕಾಯ್ದೆಮೂಲಕ ಹಿಂದುಳಿದವರ ಮೇಲಿದ್ದ ಸಾಲವನ್ನು ಮನ್ನಾ ಮಾಡಿ ಋಣಮುಕ್ತರನ್ನಾಗಿಸಲಾಯಿತು. ಭಾಗ್ಯಜ್ಯೋತಿ ಯೋಜನೆಯ ಮೂಲಕ ಕತ್ತಲೆಯ ಗುಡಿಸಲಿನಲ್ಲಿ ವಾಸಿಸುವ ಜನರ ಪಾಲಿಗೆ ಅರಸರು ಭಾಗ್ಯಜ್ಯೋತಿಯಾದರು, ನಿರುದ್ಯೋಗಿ ಪದವೀಧರರಿಗೆ ಸ್ಟೈಫಂಡ್ ವ್ಯವಸ್ಥೆ ಮಾಡಲಾಯಿತು. ಮಲಹೊರುವ ಪದ್ಧತಿ ನಿಷೇಧ ಕಾಯ್ದೆಯನ್ನು ಜಾರಿಗ ತರುವ ಮೂಲಕ ಜಾಡಮಾಲಿಗಳನ್ನು ವಿಮೋಚನೆಗೊಳಿಸಲಾಯಿತು.

ದೇವರಾಜ ಅರಸು ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಪರಿವರ್ತನೆಯ ದೊಡ್ಡ ಪರಿವರ್ತಕ ಶಕ್ತಿ ಅರಸುರವರ 110 ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ದೇವರಾಜ ಅರಸುರವರು ಕಟ್ಟಿಕೊಟ್ಟ ಪರಿವರ್ತನೆಯ ಸೌಹಾರ್ದ ಕರ್ನಾಟಕವನ್ನು ಉಳಿಸಿಕೊಳ್ಳುವ ಹಾಗೂ ಮುನ್ನಡೆಸುವ ದೊಡ್ಡ ಸವಾಲು ಮತ್ತು ಹೊಣೆಗಾರಿಕೆ ಎಲ್ಲ ಸಮುದಾಯಗಳ ಮುಂದಿದೆ.

* * *

**–ಶಿವು ದರಗಾದ**
**ಕಛೇರಿ ವ್ಯವಸ್ಥಾಪಕರು**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
**ಬಾಗಲಕೋಟೆ**

# ಮುತ್ತೈದ್ಯರ ಉಡಿತುಂಬವ ಕಾರ್ಯಕ್ರಮ

**ಆಲಮೇಲಿ :** ಸಾವಳಗಿ ಶಿವಲೀಗೇಶ್ವರ ಜಾತ್ರಾ ಮೂಹತ್ಸವ ಕಾರ್ಯಕ್ರಮದಲ್ಲಿ 160 ಮುತ್ತೈದ್ಯರ ಉಡಿತುಂಬವ ಕಾರ್ಯದ ನೇತ್ರತ್ವ ವಹಿಸಿದ ಶೋಬಾ ರಸ್ತಾಪುರ ಮತ ಗೀತಾ ಒಣಕುದರಿ ಬಾಗ್ಯ ಜ್ಯೋತಿ ಸಾರಂಗಮತಅಕ್ಕಾಮಹಾದೇವಿ ಕುರಬತಹಳ್ಳಿ ಈರಮ್ಮ ಮತ ಶೋಬಾ ಅಫಜಲಪೂ ಕಾರ್ಯಕ್ರಮ ನೆರವೇರಿಸಿದರು ದೇವರಿಗೆ ನೈವದ್ಯ ಸರ್ಮಪಿಸಿದರು.



ಜಿಟಿ ಜಿಟಿ ಮಳೆರಾಯ ಸುರುಯುತ್ತಿದ್ದರು ಸಂಬ್ರಮದಿಂದ ಜರಗಿತು ಲಕ್ಷ್ಮಣ ದತ್ತು ಅಲೋಣಿ ಪರಿವಾರ ಮುತ್ಯದಿ ಮಹಿಳೆಯರಿಗ ಉಡಿ ತುಂಬುವ ಕಾರ್ಯಕ್ರಮದಲ್ಲಿ ದಂಡಿ ಹುಮಾಲೆ ಉಡಿಕಿ ಸಾಮಗ್ರಿಗಳು ಕರಿಗಡುಬ ತುಪ್ಪದ ಪ್ರಸಾದ ವ್ಯವಸ್ಥೆ ಏರಿಡಸಿದರು ಸರ್ವರು ಪ್ರಸಾದ ಸ್ವಿಕರಿಸಿದರು ಈರಣ ಕಲಶೆಟ್ಟಿ ತಂಡದವರು ಸಂಗಿತ ಸೇವೆ ನಿಡಿದರು

ಮ.ನಿ.ಪ್ರ ಮಲ್ಲಿಬೊಮ್ಮ ಸ್ವಾಮಿಜಿ 11 ದಿಣಗಳವರೆಗೆ ಪ್ರವಚನ ಸಾಗಿ 21ರವರೆಗೆ ನಡೆಯುವದು ದಿನಾಲು ಶ್ರೀ ಮಠದಲ್ಲಿ ಪ್ರಧಾನ ಅರ್ಚಕ ಚೆನ್ನಯ್ಯ ಸಾರಂಗ ಮಠವರ ನೇತ್ರತ್ವದಲ್ಲಿ ವಿವಿದ ದಾರ್ಮಿಕ ಕಾರ್ಯಗಳು ಸಾಗಿಬಂದವು ಲಕ್ಷ್ಮಿ ಬಾಯಿ ಕುಂಬಾರ ಸುಮಿತ್ರಾ ಕುಂಬಾರ ಶ್ರೀದೇವಿ ಹಳಿಮನಿ ಸುವರ್ಣ ಮಠ ಸೇವೆ ಸಲ್ಲಿಸಿದರು ಪ್ರತಿ ದಿನ ಮಹಾ ಪ್ರಸಾದ ಇರುತ್ತದೆ ಭಕ್ತ ವೃಂದ ಇದ್ದರು

ಕಾರ್ಯಕ್ರಮದಲ್ಲಿ ಗುರು ಕುಂಬಾರ ವಿದ್ಯಾದರ ರಸ್ತಾಪುರ ಮಠ ಗೋಲ್ಲಾಳ ಉಪ್ಪಿನ ದತ್ತು ಅಲೋಣಿ ಅರ್ಚಕ ಚೆನ್ನಯ್ಯ ಮಠ ಲಕ್ಮಣ ಅಲೋಣ ಶಂಕರ ಹಳಿಮನಿ ರಮೇಶ ಅಫಜಲಪೂರ ಸಾಗರ ಅಲೋಣಿ ಸೋಮಶೇಖರ ಮಠ ಪ.ಪಂ ಸದಸ್ಯ ಚೆಂದು ಹಳಿಮನಿ ಗುಣಾದಾರ ಒಣಕುದರಿ ಅಂಬೋಜಿ ಅಲೋಣಿ ಹಿರಿಯರಾದ ಬಸವರಾಜ ಪಡಸೇಟ್ಟಿ ರೇವಣಯ್ಯ ತಾರಪೂರ ಗುರು ಕಲಶೆಟ್ಟಿ ಮಹಾಂತ ಹಳಿಮನಿ ಹಂಪಣ ಹಡಪದಅನೀಲ ಸಿಂದೆ ಸಂತೋಷಅಮರಗೊಂಡ ಗುರು ಹಡಪದ ಶಾಂತಪ್ಪ ಹಡಪದ ಶುಭಸ ಉಪ್ಪಿನ ಕಾಕ ಭಕ್ತರು ಸಾಗರದಂತೆ ಇದ್ದರು.

# ಮಳೆಗೆ ಕೆಸರು ಗದ್ದೆಯಾದ ಕಲಕೇರಿ ಬಸ್ ನಿಲ್ದಾಣ



**ತಾಳಿಕೋಟೆ** : ತಾಲ್ಲೂಕಿನ ದೊಡ್ಡ ಗ್ರಾಮವೆನ್ನಿಸಿಕೊಂಡಿರುವ ಕಲಕೇರಿಯಲ್ಲಿನ ರಸ್ತೆಗಳಲ್ಲಿ ಕಳೆದ ಒಂದು ವಾರಕ್ಕೂ ಅಧಿಕ ದಿನಗಳಿಂದ ಸುರಿಯುತ್ತಿರುವ ಜಿಟಿಜಿಟಿ, ಜೋರು ಮಳೆಯಿಂದಾಗಿ ಗುಂಡಿಗಳ ಸಂಖ್ಯೆ ಹೆಚ್ಚಿದೆ, ಬಸ್ ನಿಲ್ದಾಣವು ಕೆಸರು ಗದ್ದೆಯಾಗಿ ಪರಿಣಮಿಸಿದೆ.

ಬಸ್‌ಗಾಗಿ ಓಡೋಡಿ ಬರುವ ಪ್ರಯಾಣಿಕರಿಗೆ ಇಲ್ಲಿ ಹೆಜ್ಜೆಗಳೇ ಕಿತ್ತುವುದಿಲ್ಲ. ಅವರ ಪಾದರಕ್ಷೆಗಳು ಪಾದರಕ್ಷಣೆ ಮಾಡಲಾಗದೆ ಕೆಸರುನೆಲದಲ್ಲಿಯೇ ಹೂತು ಹೋಗುತ್ತಿವೆ. ಕಸುವಿನಿಂದ ಕಾಲೆತ್ತಿಡಲು ಹೋದರೆ ಕಾಲು ಜಾರುತ್ತವೆ. ಮೊಣಕಾಲವರೆಗಿನ ವಸ್ತ್ರಗಳು ರಾಡಿ ಸಿಂಪರಣೆ ಮಾಡಿಕೊಳ್ಳುತ್ತವೆ. ಶಾಲೆಗೆ ಹೋಗುವ ಮಕ್ಕಳು–ಶಿಕ್ಷಕರು, ಕಚೇರಿಗೆ ತೆರಳುವ ಉದ್ಯೋಗಿಗಳು, ಕಾರ್ಯಕ್ರಮಕ್ಕೊ ಇನ್ನಾವುದಕ್ಕೊ ಪರ ಊರಿಗೆ ಹೊರಟ ಪ್ರಯಾಣಿಕರು ತಮ್ಮ ಬಟ್ಟೆಗಳಿಗೆ ಕಲೆಯಂಟಿಸಿಕೊಳ್ಳದೆ ಹೋಗಲಾಗದ ಸ್ಥಿತಿ ನಿಲ್ದಾಣದ ಮೈದಾನದ್ದು.

ನಿಲ್ದಾಣವು ಟಾರ್, ಇಲ್ಲವೇ ಸಿಸಿ ರಸ್ತೆ ಮಾಡಿಸಿದರೆ ಈ ಸಮಸ್ಯೆಗಳಿಗೆ ಮುಕ್ತಿ ಸಿಗಬಹುದು. ಆದರೆ ಕಾಮಗಾರಿಗಳೇ ನಡೆಯುತ್ತಿಲ್ಲ ಎಂಬುದು ಜನತೆಯ ಅಳಲು.

ಸುತ್ತಲಿನ 60 ಗ್ರಾಮಗಳಿಗೆ ಇದು ಕೇಂದ್ರಸ್ಥಾನವಾಗಿದೆ. ಗ್ರಾಮದಲ್ಲಿ ಸುಪ್ರಸಿದ್ಧ ಮಡಿವಾಳೇಶ್ವರ ದೇವಸ್ಥಾನವಿದೆ. ಶ್ರಾವಣ ಮಾಸದ ಪ್ರಯುಕ್ತ ಭಕ್ತರ ಸಂದಣಿ ಹೆಚ್ಚು. ಜೊತೆಗೆ ಶಾಲೆ– ಕಾಲೇಜು, ವ್ಯಾಪಾರ, ವಹಿವಾಟಿಗೆ, ಆಸ್ಪತ್ರೆಗೆಂದು ಬರುವವರ ಸಂಖ್ಯೆಯೂ ಅಪಾರವಾಗಿದೆ. ಆದರೆ ಬಸ್ ನಿಲ್ದಾಣದ ಸ್ಥಿತಿ ನೋಡಿ ಗಾಬರಿಯಾಗುತ್ತಾರೆ.

ನಿಲ್ದಾಣವೋ ಕೆಸರು ಗದ್ದೆಯೋ ಎಂದು ಭಯ ಬೀಳುವಂತಾಗಿದೆ. ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ನಡೆಯಬೇಕು ಆಯ ತಪ್ಪಿದರೆ ಅಪಾಯ ಖಂಡಿತ. ಇನ್ನು ನಿಲ್ದಾಣದಲ್ಲಿ ಶೌಚಾಲಯ ಬಂದ್ ಆಗಿ ಮೂರ್ನಾಲ್ಕು ತಿಂಗಳೇ ಆಗಿವೆ. ಮಹಿಳೆಯರಿಗೆಂದು ತಗಡಿನ ಆವರಣದ ಗೋಡೆ ನಿರ್ಮಿಸಿ ಮರೆ ಮಾಡಿದ್ದರೂ ಮಳೆಯಿಂದ ಅವರಿಗೆ ರಕ್ಷಣೆಯಾಗದು. ಅಲ್ಲಿ ಮಹಿಳೆಯರ ಮೂತ್ರಾಲಯವೆಂಬ ಫಲಕವೂ ಇಲ್ಲ.

ನಿಲ್ದಾಣದ ಕಟ್ಟಡವೂ ಚಿಕ್ಕದು. ಮಳೆಯ ಕಾರಣ ಆಶ್ರಯಕ್ಕೆಂದು ಒಳ ಬರುವ ಹೆಚ್ಚಿನವರಿಗೆ ನಿಲ್ದಾಣದ ಸೂರು ಸಾಕಾಗದು. ಸಂಬಂಧಿಸಿದ ಅಧಿಕಾರಿಗಳನ್ನು ವಿಚಾರಿಸಿದರೆ ಶೀಘ್ರದಲ್ಲಿ ನಿಲ್ದಾಣದ ಸುಧಾರಣೆ ನಡೆಯಲಿದೆಎನ್ನುತ್ತಾರೆ.ಆದರೆಯಾವಾಗಎಂಬುದೇ ಸಾರ್ವಜನಿಕರ ಯಕ್ಷಪ್ರಶ್ನೆ. ಅದಕ್ಕುತ್ತರ ದೊರಕಿ ಸಮಸ್ಯೆ ಬಗೆಹರಿದರೆ ಜನತೆ ನಿರಾಳವಾಗಬಹುದು ಎನ್ನುತ್ತಾರೆ ಗ್ರಾಮದ ಮಲ್ಲು ತಳವಾರ ಹಾಗೂ ಶಿಕ್ಷಕ ಎಂ.ಎಲ್.ವಡ್ಡರ.

# ಆಲಮಟ್ಟಿ: 2 ಲಕ್ಷ ಕ್ಯೂಸೆಕ್ ನೀರು ಬಿಡುಗಡೆ



**ಆಲಮಟ್ಟಿ** : ಮಹಾರಾಷ್ಟ್ರ ಹಾಗೂ ಕರ್ನಾಟಕದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಮುಂಜಾಗ್ರತೆಯ ಕ್ರಮವಾಗಿ ಮಂಗಳವಾರ ಸಂಜೆಯಿಂದ ಆಲಮಟ್ಟಿ ಜಲಾಶಯದ ಹೊರಹರಿವನ್ನು 2 ಲಕ್ಷ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದೆ.

ಬೆಳಿಗ್ಗೆ 1.50 ಲಕ್ಷ ಕ್ಯೂಸೆಕ್ ಇದ್ದ ಹೊರಹರಿವನ್ನು ಬೆಳಿಗ್ಗೆ 10ಕ್ಕೆ 1.75 ಲಕ್ಷ ಕ್ಯೂಸೆಕ್‌ಗೆ ಹಾಗೂ ಸಂಜೆ 6ಕ್ಕೆ 2 ಲಕ್ಷ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದೆ. ಇದು ಈ ವರ್ಷದ ಗರಿಷ್ಠ ಹೊರಹರಿವು.

**ಮಳೆಯ ಅಬ್ಬರ:**

ಮಹಾರಾಷ್ಟ್ರದ ಕೃಷ್ಣಾ ಕಣಿವೆಯಲ್ಲಿ ಭಾರಿ ಮಳೆ ಸುರಿಯುತ್ತಿದೆ. ಮಂಗಳವಾರ ಒಂದೇ ದಿನ ನವಜಾದಲ್ಲಿ ದಾಖಲೆಯ 31.6 ಸೆಂ.ಮೀ, ಕೊಯ್ನಾದಲ್ಲಿ 19.2 ಸೆಂ.ಮೀ, ರಾಧಾನಗರಿಯಲ್ಲಿ 22.1 ಸೆಂ.ಮೀ, ಮಹಾಬಲೇಶ್ವರದಲ್ಲಿ 15.1 ಸೆಂ.ಮೀ, ದೂಧಗಂಗಾದಲ್ಲಿ 11.9 ಸೆಂ.ಮೀ ಮಳೆಯಾಗಿದೆ.

ಮಹಾರಾಷ್ಟ್ರದ ಅಣೆಕಟ್ಟು ಕೊಯ್ನಾ ಜಲಾಶಯದಿಂದ 80,500 ಕ್ಯೂಸೆಕ್ ಹಾಗೂ ವಾರಣಾದಿಂದ 36,630 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಇದರ ಜತೆಗೆ ಕರ್ನಾಟಕದ ಕಲ್ಲೋಳ ಬ್ಯಾರೇಜ್ ಬಳಿ ಕೃಷ್ಣಾ ನದಿಗೆ ಬಂದು ಸೇರುವ ದೂಧಗಂಗಾ ನದಿಯ ಹರಿವು 21,824 ಕ್ಯೂಸೆಕ್ ಸೇರಿ, ಅಲ್ಲಿಯ ಕೃಷ್ಣೆಯ ಹರಿವು 1 ಲಕ್ಷ ಕ್ಯೂಸೆಕ್ ದಾಟಿದೆ.

ಆಲಮಟ್ಟಿ ಜಲಾಶಯದ ಹಿಂಭಾಗದ ಘಟಪ್ರಭಾ ನದಿಯ ಹರಿವು ಹೆಚ್ಚಾಗಿದ್ದು, ಲೋಳಸೂರ ಬಳಿ ಸುಮಾರು 50 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಇವೆಲ್ಲಾ ನೀರು ಮುಂದಿನ 48 ಗಂಟೆಯೊಳಗೆ ಆಲಮಟ್ಟಿ ಜಲಾಶಯಕ್ಕೆ ಬಂದು ಸೇರಲಿದ್ದು, ಜಲಾಶಯದ ಒಳಹರಿವು 1.50 ಲಕ್ಷ ಕ್ಯೂಸೆಕ್ ದಾಟುವ ಸಾಧ್ಯತೆಯಿದೆ.

ಮುಂಜಾಗ್ರತೆಯ ಕ್ರಮವಾಗಿ 2 ಲಕ್ಷ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಒಂದು ವೇಳೆ ಬುಧವಾರವೂ ಮಳೆಯ ಅಬ್ಬರ ಹೀಗೆಯೇ ಮುಂದುವರೆದರೇ ಹೊರಹರಿವು ಮತ್ತಷ್ಟು ಹೆಚ್ಚಲಿದೆ ಎಂದು ಅಣೆಕಟ್ಟು ವಲಯದ ಮುಖ್ಯ ಎಂಜಿನಿಯರ್ ಡಿ.ಬಸವರಾಜ ತಿಳಿಸಿದರು.

ಆಲಮಟ್ಟಿ ಜಲಾಶಯಕ್ಕೆ ಸಂಜೆ 6ಕ್ಕೆ 1,11,306 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಜಲಾಶಯದ ಮಟ್ಟ 518.92 ಮೀಟರ್ ಇದೆ.

**ನದಿ ತೀರದಲ್ಲಿ ಕಟ್ಟೆಚ್ಚರ:**

ಆಲಮಟ್ಟಿ ಜಲಾಶಯದ ಹೊರಹರಿವು ಹೆಚ್ಚಿದ್ದರಿಂದ ಕೃಷ್ಣಾ ನದಿ ತೀರದ ಗ್ರಾಮಗಳಾದ ಅರಳದಿನ್ನಿ, ಕಾಶೀನಕುಂಟಿ, ಯಲಗೂರು, ಯಲ್ಲಮ್ಮನಬೂದಿಹಾಳ, ಮಸೂತಿ ಗ್ರಾಮಗಳ ಜಮೀನುಗಳಿಗೆ ನೀರು ನುಗ್ಗುವ ಆತಂಕ ಎದುರಾಗಿದೆ. ಆದರೆ, ಆಲಮಟ್ಟಿ ಜಲಾಶಯಕ್ಕಿಂತಲೂ ಹೆಚ್ಚಿನ ನೀರನ್ನು ನಾರಾಯಣಪುರ ಜಲಾಶಯದಿಂದಲೂ ಬಿಡಲಾಗುತ್ತಿದ್ದು, ಇದರಿಂದ ಪ್ರವಾಹ ಸ್ಥಿತಿ ಉಂಟಾಗುವ ಸಾಧ್ಯತೆ ಕಡಿಮೆ. 4 ಲಕ್ಷ ಕ್ಯೂಸೆಕ್‌ಗೂ ಅಧಿಕ ನೀರು ಬಿಟ್ಟಾಗ ಮಾತ್ರ ಮಸೂತಿ ಗ್ರಾಮದ ಕೆಲ ಮನೆಗಳು ಜಲಾವೃತಗೊಳ್ಳುತ್ತವೆ. ಆದರೆ, ಸದ್ಯಕ್ಕೆ ಆ ಸ್ಥಿತಿಯಿಲ್ಲ ಎಂದು ತಹಶೀಲ್ದಾರ್ ಎ.ಡಿ. ಅಮರಾವದಗಿ ತಿಳಿಸಿದರು.

ಕೃಷ್ಣಾ ತೀರದ ಗ್ರಾಮಗಳಲ್ಲಿ ಡಂಗೂರು ಸಾರಿ ಜನ, ಜಾನುವಾರುಗಳು ನದಿ ಪಾತ್ರಕ್ಕೆ ತೆರಳದಂತೆ ಸೂಚಿಸಲಾಗುತ್ತಿದೆ. ತಾಲ್ಲೂಕು ಆಡಳಿತ 24 ಗಂಟೆಯೂ ಸತತ ನಿಗಾ ಇಟ್ಟಿದೆ ಎಂದರು.

# ಆದಿವಾಸಿಗಳ ಸಮಸ್ಯೆ ನಿವಾರಣೆಗೆ ಯತ್ನ: ದ್ರೌಪದಿ ಮುರ್ಮು



**ಸೋಲಾಪುರ** : ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಆದಿವಾಸಿಗಳ ಸಮಸ್ಯೆ ಕುರಿತು ಸಭೆ ನಡೆಸಿದರು.

ಸೋಲಾಪುರದ ಅನುಸೂಚಿತ ಪಂಗಡ ಮೋರ್ಚಾದ ಪಶ್ಚಿಮ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಜ್ಞಾನೇಶ್ವರ ಭೋಸಲೆ ಹಾಗೂ ಕಾರ್ಯಕಾರಿಣಿ ಸದಸ್ಯೆ ರಾಜಶ್ರೀ ಚವ್ಹಾಣ ಅವರು ಸಭೆಯಲ್ಲಿ ಪಾಲ್ಗೊಂಡು, ವಿವಿಧ ಸಮಸ್ಯೆ ಕುರಿತು ಚರ್ಚಿಸಿದರು.

ಆದಿವಾಸಿ ಪಾರಧಿ ಸಮಾಜದವರಿಗೆ ಅಂಟಿದ ಅಪರಾಧಿ ಹಣೆಪಟ್ಟಿ ತೆಗೆದುಹಾಕಬೇಕು. ಸಮಾಜದ ಉನ್ನತಿಗಾಗಿ ಕೃಷಿ ಭೂಮಿ, ವಸತಿ, ಶಿಕ್ಷಣ ಹಾಗೂ ಉದ್ಯೋಗ ಸೌಲಭ್ಯ ನೀಡಬೇಕು. ಸಮಾಜವನ್ನು ಮುಖ್ಯವಾಹಿನಿಗೆ ತರಬೇಕು' ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಷ್ಟ್ರಪತಿ ಮುರ್ಮು ಅವರು, 'ಆದಿವಾಸಿಗಳಿಗೆ ಹಕ್ಕು?ಅಧಿಕಾರ ನೀಡಿ ಮುಖ್ಯವಾಹಿನಿಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ನಡೆಯುವ ಸಭೆಗೆ ತಮ್ಮನ್ನು ಕರೆಯಲಾಗುವುದು' ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಷ್ಟ್ರಪತಿ ಅವರಿಗೆ ಸೋಲಾಪುರ ಚಾದರ ಹಾಗೂ ಶಿವಯೋಗಿ ಸಿದ್ದರಾಮೇಶ್ವರ ಮೂರ್ತಿ ನೀಡಿ ಸನ್ಮಾನಿಸಲಾಯಿತು. ಸೋಲಾಪುರದ ಪ್ರತಿನಿಧಿಗಳಾದ ರಾಜಶ್ರೀ ಕಾಳೆ, ವಿಜಯಾ ಭೋಸಲೆ, ಸುದರ್ಶನ ಶಿಂಧೆ ಭಾಗವಹಿಸಿದ್ದರು.

# ಆಯೋಗ ನಿಗದಿಪಡಿಸಿದಷ್ಟೇ ಖರ್ಚು ಮಾಡಿದ್ದೇನೆಂದು ಪ್ರಮಾಣ ಮಾಡಲಿ: ನಿರಾಣಿ ಸವಾಲು



**ಬಾಗಲಕೋಟೆ** : 'ಯಾರಿಗೂ ದುಡ್ಡು ಕೊಡದೇ ಪ್ರಾಮಾಣಿಕವಾಗಿ ಗೆದ್ದು ಬಂದಿದ್ದೇನೆ ಎಂದು ಹೇಳಿಕೊಳ್ಳುವ ಶಾಸಕ ಜೆ.ಟಿ. ಪಾಟೀಲ, ಚುನಾವಣಾ ಆಯೋಗ ನಿಗದಿ ಪಡಿಸಿದಷ್ಟೇ ಹಣ ಖರ್ಚು ಮಾಡಿ ಗೆದ್ದಿದ್ದೇನೆ ಎಂದು ತಂದೆ–ತಾಯಿ, ಮನೆ ದೇವರ ಮೇಲೆ ಆಣೆ ಮಾಡಿ ಹೇಳಲಿ' ಎಂದು ಮಾಜಿ ಸಚಿವ ಮುರುಗೇಶ್ ನಿರಾಣಿ ಸವಾಲು ಹಾಕಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಾಮಾಣಿಕವಾಗಿ ಗೆದ್ದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ನನ್ನ ವಿರುದ್ಧ ಗೆದ್ದು ತೋರಿಸಲಿ. ಚುನಾವಣೆಗೆ ಆಯೋಗ ನಿಗದಿ ಪಡಿಸಿದ ಹಣವನ್ನು ಅವರಿಗೆ ನಾನೇ ಕೊಡುತ್ತೇನೆ. ಅವರು ಎಷ್ಟು ಬೆಟ್ ಕಟ್ಟುತ್ತಾರೋ ಒಂದಕ್ಕೆ ಹತ್ತರಷ್ಟು ಕೊಡುತ್ತೇನೆ' ಎಂದು ಹೇಳಿದರು.

2004ರ ಚುನಾವಣೆಯಲ್ಲಿ 35 ಸಾವಿರ ನಕಲಿ ಮತಗಳಿಂದಾಗಿ ಸೋತಿದ್ದೇನೆ ಎಂದಿದ್ದಾರೆ. ಆಗ ಅವರದ್ದೇ ಸರ್ಕಾರವಿತ್ತು. ಏನು ಮಾಡುತ್ತಿದ್ದರು.

ಈಗ ಜ್ಞಾನೋದಯವಾಗಿದೆಯೇ 2008 ಮತ್ತು 2018ರಲ್ಲಿ ಸೋತಿದ್ದೇಕೆ ಸುಳ್ಳು ಹೇಳುವುದೇ ಕಾಂಗ್ರೆಸ್ ನಾಯಕರ ಚಾಳಿಯಾಗಿದೆ.

ಕಳೆದ ಚುನಾವಣೆಯಲ್ಲಿ ಬಿಜೆಪಿ ಮುಖಂಡರ ಹೆಸರನ್ನು ಮತದಾರರ ಪಟ್ಟಿಯಿಂದ ರದ್ದುಪಡಿಸಲಾಗಿತ್ತು. ಅದಕ್ಕೆ ಬೇಕಾದರೆ ದಾಖಲೆ ಕೊಡುವೆ' ಎಂದರು.

ಪ್ರಾಮಾಣಿಕ ಎನ್ನುವ ಶಾಸಕರು, ಚುನಾವಣೆಯಲ್ಲಿ 15 ಕೋಟಿ ಖರ್ಚು ಮಾಡಿರುವೆ ಎಂದು ಹೇಳಿ ಅಧಿಕಾರಿಗಳ ವರ್ಗಾವಣೆ, ಗುತ್ತಿಗೆದಾರರಿಂದ ಹಣ ಪಡೆಯುತ್ತಿದ್ದಾರೆ.

ನನ್ನ ಅವಧಿಯಲ್ಲಿ ಮಂಜೂರಾದ ಕಾಮಗಾರಿಗಳನ್ನು ನಿಲ್ಲಿಸಿದ್ದರು. ಕಮಿಷನ್ ನೀಡಿದ ಮೇಲೆ ಮತ್ತೆ ಆರಂಭಿಸಲು ಅವಕಾಶ ಮಾಡಿಕೊಟ್ಟಿದ್ದಾರೆ' ಎಂದು ದೂರಿದರು.

ಶಾಸಕನಾಗಿದ್ದ ವಿವಿಧ ಗುಡಿಗಳು, ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿದ್ದೆ.

ಅದರಲ್ಲಿ ಅರ್ಧದಷ್ಟು ಅನುದಾನ ಬಿಡುಗಡೆಯಾಗಿತ್ತು. ಹೇಗೂ ಸರ್ಕಾರದಿಂದ ಅನುದಾನ ಬರುತ್ತದೆ ಎಂದು ಗ್ರಾಮಸ್ಥರೇ ಕೆಲವು ಕಡೆ ಕಾಮಗಾರಿ ಪೂರ್ಣಗೊಳಿಸಿದ್ದಾರೆ.

ಈಗ ಪಾಟೀಲರು ಅನುದಾನವನ್ನು ಬೇರೆ ಕಡೆ ನೀಡುತ್ತಿದ್ದಾರೆ.

ಹೊಸ ಅನುದಾನ ತಂದು ಅಭಿವೃದ್ಧಿ ಮಾಡಲಿ' ಎಂದು ಆಗ್ರಹಿಸಿದರು.

# ಯಲಬುರ್ಗಾ: ಆರೇ ತಿಂಗಳಲ್ಲಿ ಕಿತ್ತುಹೋದ ಸೇತುವೆ



**ಯಲಬುರ್ಗಾ** : ಕಳೆದ ಒಂದು ವಾರದಲ್ಲಿ ಸುರಿದ ಮಳೆಗೆ ತಾಲ್ಲೂಕಿನ ಗೆದಗೇರಿ–ಮಲ್ಕಸಮುದ್ರ ಗ್ರಾಮದ ಸಂಪರ್ಕ ರಸ್ತೆ ಮಧ್ಯೆ ಇರುವ ಕಿರು ಸೇತುವೆ ಸಂಪೂರ್ಣ ಕಿತ್ತುಹೋಗಿದೆ. ನಿರ್ಮಾಣಗೊಂಡು ಕೇವಲ ಆರೇಳು ತಿಂಗಳಲ್ಲೇ ಒಂದೆರೆಡು ಮಳೆಗೆ ಕಿತ್ತುಹೋಗಿದ್ದು, ಕಾಮಗಾರಿಯ ಗುಣಮಟ್ಟದ ಕುರಿತು ಸಾರ್ವಜನಿಕರಲ್ಲಿ ಪ್ರಶ್ನೆ ಹುಟ್ಟುಹಾಕುವಂತೆ ಮಾಡಿದೆ.


ರೈತಾಪಿ ಜನರು ಹಾಗೂ ಜಾನುವಾರುಗಳು ತಮ್ಮ ಜಮೀನು ಮತ್ತು ಅಕ್ಕಪಕ್ಕದ ಗ್ರಾಮಕ್ಕೆ ಈ ಸೇತುವೆ ಸಂಪರ್ಕ ಕಲ್ಪಿಸಿತ್ತು.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದವರ ಉಸ್ತುವಾರಿಯಲ್ಲಿ ನಿರ್ಮಾಣಗೊಂಡಿದ್ದ ಈ ಸೇತುವೆಯ ನಿರ್ಮಾಣದ ಹಂತದಲ್ಲಿಯೇ ಸಾಕಷ್ಟು ಮೇಲಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮಕ್ಕೆ ಮುಂದಾಗದೇ ಇರುವ ಕಾರಣ ಈ ಅವ್ಯವಸ್ಥೆಗೆ ಕಾರಣವಾಗಿದೆ. ಅಲ್ಲದೇ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು ನೀಡುವಂತೆ ಜನಪ್ರತಿನಿಧಿಗಳು ಅಧಿಕಾರಿಗಳಿಗೆ ಹೇಳಿ ಸಾರ್ವಜನಿಕರು ಕೂಡಾ ಕಳಪೆ ಕಾಮಗಾರಿಯನ್ನು ಪ್ರಶ್ನಿಸದಂತೆ ನೋಡಿಕೊಳ್ಳುತ್ತಿದ್ದರು' ಎಂದು ಗೆದಗೇರಿ ಜನಪರಹೋರಾಟ ಸಮಿತಿಯ ಪದಾಧಿಕಾರಿ ಹನುಮೇಶ, ಮಹೇಶಗೌಡ ಪಾಟೀಲ ಆರೋಪಿಸುತ್ತಾರೆ.

ನಿರೀಕ್ಷೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮಳೆ ಸುರಿದಿದ್ದರಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಹರಿವು ಉಂಟಾಗಿ ಸೇತುವೆಗೆ ಅಳವಡಿಸಿದ ಕೊಳವೆಗಳಿಗೆ ಅಡ್ಡ ಗಿಡಗಂಟಿ ಸಿಲುಕಿ ನೀರು ಹರಿಯದೇ ಅಕ್ಕಪಕ್ಕದಲ್ಲಿ ನುಗ್ಗಿ ಈ ಅವಾಂತರಕ್ಕೆ ಕಾರಣವಾಗುತ್ತದೆ. ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ. ಅಲ್ಲದೇ ಸಾಮಾನ್ಯ ಸಭೆಯಲ್ಲಿಯೂ ನಿಗಮದ ಅಧಿಕಾರಿಗಳಿಗೆ ತ್ವರಿತವಾಗಿ ಕ್ರಮಕೈಗೊಳ್ಳಲು ಸೂಚಿಸಲಾಗಿದೆ' ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ ಪಾಟೀಲ ತಿಳಿಸಿದ್ದಾರೆ.

ರೈತರು ತಮ್ಮ ತಮ್ಮ ಹೊಲಮನೆಗಳಿಗೆ ತಿರುಗಾಡುವ ಬಹುಮುಖ್ಯ ರಸ್ತೆಯಾಗಿದ್ದರಿಂದ ತ್ವರಿತವಾಗಿ ಗುಣಮಟ್ಟದಲ್ಲಿ ನಿರ್ಮಾಣಗೊಳ್ಳುವುದು ಅಗತ್ಯವಿದೆ. ನಾಲ್ಕು ಹಾಗೂ ಎರಡು ಚಕ್ರಗಳ ವಾಹನಗಳು ಕೂಡಾ ಸಾಕಷ್ಟು ಸಂಖ್ಯೆಯಲ್ಲಿ ಇದೇ ರಸ್ತೆಯ ಮೇಲೆ ಸಂಚಾರಗೊಳ್ಳುವುದರಿಂದ ರೈತರಿಗೆ ತೀವ್ರ ತೊಂದರೆಯಾಗಿದೆ. ತಾಂತ್ರಿಕ ಕಾರಣಗಳನ್ನು ಹೇಳಿಕೊಂಡು ದಿನಗಳನ್ನು ನೂಕುತ್ತಾ ಸಾಗಿದರೆ ಸಾರ್ವಜನಿಕರು ನಿತ್ಯ ಯಾತನೆ ಅನುಭವಿಸಬೇಕಾಗುತ್ತದೆ. ಕಾರಣ ಮೇಲಧಿಕಾರಿಗಳು ಹೊಸದಾಗಿ ಮರು ನಿರ್ಮಾಣಕ್ಕೆ ಕ್ರಮಕೈಗೊಳ್ಳಬೇಕಾಗಿದೆ' ಎಂದು ಗೆದಗೇರಿ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಹಿರೇಬೆಣಕಲ್ ಛಾಯಾಚಿತ್ರಗಳ ಪ್ರದರ್ಶನ



**ಕೊಪ್ಪಳ** : ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲ್‌ನಲ್ಲಿರುವ ಐದು ಸಾವಿರ ವರ್ಷಗಳಷ್ಟು ಹಳೆಯದಾದ ಶಿಲಾ ಸಮಾಧಿಗಳ ಪ್ರಾಗೈತಿಹಾಸಿಕ ಸ್ಥಳಗಳ ತರಹೇವಾರಿ ಛಾಯಾಚಿತ್ರಗಳು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ಮುಂಭಾಗದಲ್ಲಿ ಮಂಗಳವಾರ ಕಂಗೊಳಿಸಿದವು.

ವಿಶ್ವ ಪಾರಂಪರಿಕ ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಜಿಲ್ಲೆಯ ಹಿರೇಬೆಣಕಲ್ ಗ್ರಾಮದ ಬೆಟ್ಟದ ಮೇಲಿರುವ ಈ ಚಿತ್ರಗಳನ್ನು ಎಲ್ಲರಿಗೂ ಪರಿಚಯಿಸಬೇಕು ಎನ್ನುವ ಕಾರಣಕ್ಕಾಗಿ ಪ್ರವಾಸೋದ್ಯಮ ಇಲಾಖೆ ಛಾಯಾಚಿತ್ರಗಳ ಪ್ರದರ್ಶನ ಹಮ್ಮಿಕೊಂಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರದರ್ಶನಕ್ಕೆ ಚಾಲನೆ ನೀಡಿದರು.

ದೇಶದಲ್ಲಿ ಮೇಘಾಲಯ ಮತ್ತು ಹಿರೇಬೆಣಕಲ್‌ನಲ್ಲಿ ಮಾತ್ರ ಆದಿಮಾನವರು ವಾಸವಾಗಿದ್ದ ಕುರುಹುಗಳು ಇವೆ. ಹಿರೇಬೆಣಕಲ್ ಮೋರೆರ ಬೆಟ್ಟಗಳನ್ನು ವಿಶ್ವಪಾರಂಪರಿಕ ತಾಣವಾಗಿಸಲು ರೂಪಿಸಬೇಕಾದ ಕ್ರಮಗಳ ಬಗ್ಗೆಯೂ ಸರ್ಕಾರ ಯೋಜನೆ ರೂಪಿಸುತ್ತಿದೆ.

ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅವರು ಜೂನ್‌ನಲ್ಲಿ ಜಿಲ್ಲೆಯ ಪ್ರವಾಸ ಕೈಗೊಂಡಾಗ ನಮ್ಮ ಸ್ಮಾರಕ ದರ್ಶನ ಮತ್ತು ಸ್ಮಾರಕಗಳ ಸಂರಕ್ಷಣೆಯ ಪ್ರವಾಸದ ಅಂಗವಾಗಿ ಹಿರೇಬೆಣಕಲ್‌ಗೆ ಭೇಟಿ ನೀಡಿದ್ದಾಗ,'ಇಲ್ಲಿನ ಸ್ಮಾರಕಗಳ ಮೌಲ್ಯ ಎಲ್ಲರಿಗೂ ಗೊತ್ತಾಗುವಂತೆ ಮಾಡಲು ಬೆಂಗಳೂರಿನಲ್ಲಿ ಛಾಯಾಚಿತ್ರಗಳ ಪ್ರದರ್ಶನ ಆಯೋಜಿಸುವುದಾಗಿ' ಹೇಳಿದ್ದರು. ಅದರಂತೆ ಬೆಂಗಳೂರಿನಲ್ಲಿ ಪ್ರದರ್ಶನ ನಡೆಯಿತು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಸೇರಿದಂತೆ ಅನೇಕರು ಇದ್ದರು.

# ಜಿಟಿಜಿಟಿ ಮಳೆ; ಹಸಿಬರದ ಛಾಯೆ



**ಕುಷ್ಟಗಿ** : ಒಂದು ತಿಂಗಳಿನಿಂದ ನಿರಂತರವಾಗಿ ಸುರಿಯುತ್ತಿರುವ ಜಿಟಿ ಜಿಟಿ ಮಳೆಯಿಂದಾಗಿ ಸೂರ್ಯರಶ್ಮಿ ನೆಲಕ್ಕೆ ಸೋಕಿಲ್ಲ. ಹೊಲಗಳಲ್ಲಿ ಬೆಳೆಗಳಿಗಿಂತ ಕಳೆ ಮೇಲುಗೈ ಸಾಧಿಸಿದೆ.

ತೇವಾಂಶ ಹೆಚ್ಚಾಗಿ ಬೆಳೆಗಳು ಹಾನಿಗೊಳಗಾಗುತ್ತಿದ್ದು, ರೈತರನ್ನು ಆತಂಕಕ್ಕೆ ದೂಡಿದೆ.

ಹಿಂಗಾರು ಹಂಗಾಮಿನ ವಿವಿಧ ಬೆಳಗಳ ಮೇಲೆ ದುಷ್ಪರಿಣಾಮ ಉಂಟು ಮಾಡಿರುವ ಮಳೆ ಇನ್ನೂ ಬಿಡುವ ಲಕ್ಷಣಗಳೇ ಇಲ್ಲ.

ಇದೇ ಪರಿಸ್ಥಿತಿ ಮುಂದುವರಿದರೆ ಬೆಳೆಗಳು ಸಂಪೂರ್ಣ ಕೈಕೊಡುವ ಸಾಧ್ಯತೆ ಕಣ್ಮುಂದಿರುವುದರಿಂದ ಹಸಿ ಬರದ ಛಾಯೆ ಆವರಿಸಿದೆ.

ಕೃಷಿ ಬೆಳೆಗಳ ಜೊತೆಗೆ ತರಕಾರಿ, ಹಣ್ಣುಗಳು ಸೇರಿ ತೋಟಗಾರಿಕೆ ಬೆಳೆಗಳು ಹಾನಿಗೊಳಗಾಗಿವೆ.

ಹೆಸರು ಕಾಯಿಯಲ್ಲಿನ ಕಾಳುಗಳು ಮೊಳಕೆಯೊಡೆದು ಬಹುತೇಕ ಹಾಳಾಗಿದೆ.

ಎಳ್ಳು ಕೊಯಿಲಿಗೆ ಬಂದಿ, ಕೊಯಿಲಾಗಿದ್ದನ್ನು ಗೂಡು ಹಾಕಲಾಗಿದ್ದು ಬಿಸಿಲು ಇಲ್ಲದೆ ಜಿನುಗು ಮಳೆಯಿಂದ ಕೊಳೆಯುವ ಹಂತ ತಲುಪಿವೆ.

ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಎಂದು ಕುಷ್ಟಗಿಯ ರೈತ ಹನುಮಂತ ಕುರಿ ಅಸಹಾಯಕತೆ ವ್ಯಕ್ತಪಡಿಸಿದರು.

ತಾಲ್ಲೂಕು ಹಾಗೂ ಸುತ್ತಲಿನ ಪ್ರದೇಶದಲ್ಲಿ ಬಹಳಷ್ಟು ಜನರು ದಾಳಿಂಬೆ ಬೆಳೆದಿದ್ದು, ಕಾಯಿಗಳಿಗೆ ರೋಗ ತಗುಲಿದೆ.

ಹೊಲಗಳಲ್ಲಿ ನೀರು ಸಂಗ್ರಹವಾಗಿ ಗಿಡಗಳಿಗೂ ಹಾನಿಯಾಗುತ್ತಿದೆ.

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೆಳೆದರೂ ನಿರಂತರ ಮಳೆಗೆ ಬೆಳೆ ಹಾಳುಗುತ್ತಿದೆ ಎಂಬ ಕೊರಗು ದಾಳಿಂಬೆ ಬೆಳೆಗಾರರದ್ದು.

ಅತಿಯಾದ ಮಳೆಯಿಂದ ತಾಕಿನಲ್ಲಿ ನೀರು ಸಂಗ್ರವಹಾಗಿ ತೇವಾಂಶ ಹೆಚ್ಚಿದೆ. ಈ ಕಾರಣಕ್ಕೆ ಕಾಯಿಕಟ್ಟುವ ಮೊದಲೇ ಮೊಗ್ಗುಗಳು ಉದುರುತ್ತಿವೆ.

ಕಟ್ಟಿದ ಕಾಯಿಗಳೂ ನೆಲಕ್ಕೆ ಬೀಳುತ್ತಿವೆ. ಇನ್ನು ಹತ್ತಿ ಬೆಳೆ ನಸುಗೆಂಪು ಬಣಕ್ಕೆ ತಿರುಗಿದ್ದು ಬೆಳವಣಿಗೆ ಕುಂಠಿತಗೊಂಡಿದೆ ಎಂದು ಮೆಣೆದಾಳದ ರೈತ ದುರುಗಪ್ಪ ಗೊರ್ಲೂಟಿ, ಹನುಮಗೌಡ ಇತರರು ಗೋಳು ತೋಡಿಕೊಂಡರು.

ಸಜ್ಜೆ ತೆನೆಯಲ್ಲೇ ಮೊಳಕೆ: ಮುಂಗಾರು ಹಂಗಾಮಿನಲ್ಲಿ ಬೆಳೆದ ಸಜ್ಜೆ ಬೆಳೆ ಅತ್ಯುತ್ತಮವಾಗಿದೆ. ತೆನೆಗಳು ಕಾಳು ತುಂಬಿಕೊಂಡಿವೆ. ಆದರೆ ನಿರಂತರ ಮಳೆ ಜಿನುಗುತ್ತಿರುವುದರಿಂದ ತೇವಾಂಶ ಹೆಚ್ಚಿ ತೆನೆಯಲ್ಲಿಯೇ ಮೊಳಕೆಯೊಡೆಯುತ್ತಿರುವುದು ರೈತರ ನಿದ್ದೆಗೆಡಿಸಿದೆ.

# ಅಳಿಯ ಚನ್ನಬಸವೇಶ್ವರ ಉಚ್ಚಾಯ



**ಕುಕನೂರು** : ತಾಲ್ಲೂಕಿನ ಕಕ್ಕಿಹಳ್ಳಿ ಗ್ರಾಮದಲ್ಲಿ ಅಳಿಯ ಚನ್ನಬಸವೇಶ್ವರ ಸ್ವಾಮಿಯ ಉಚ್ಚಾಯ ಮಂಗಳವಾರ ಅದ್ದೂರಿಯಾಗಿ ಜರುಗಿತು.

ಯಲಬುರ್ಗಾ ಶ್ರೀಧರ ಮುರಡಿ ಹಿರೇಮಠದ ಬಸವಲಿಂಗೇಶ್ವರ ಸ್ವಾಮೀಜಿ ಮತ್ತು ಅನ್ನದಾನೀಶ್ವರ ಶಾಖಾಮಠದ ಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡಿದರು.

ಗುದ್ನೇಶ್ವರಮಠ ಮತ್ತು ಕೊನಾಪುರ ಗ್ರಾಮದ ಭಜನಾ ಮೇಳ, ಸಕಲ ಮಂಗಳ ವಾದ್ಯ ಮೇಳ ರಥೋತ್ಸವಕ್ಕೆ ಮೆರುಗು ನೀಡಿದವು.

ಶ್ರಾವಣ ಮಾಸ ಪೂರ್ತಿ ಅಜ್ಜಯ್ಯನ ಮಠದಲ್ಲಿ ಅಳಿಯ ಚನ್ನಬಸವೇಶ್ವರ ಸ್ವಾಮಿಯ ಗದ್ದುಗೆಗೆ ಅಭಿಷೇಕ,

ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆದವು.

# ಕಲ್ಯಾಣದಲ್ಲಿ ವರ್ಷಧಾರೆ: ಮುಳುಗಿದ ಸೇತುವೆ



**ಕಲಬುರಗಿ :** ಕಲ್ಯಾಣ ಕರ್ನಾಟಕದ ಕಲಬುರಗಿ,
ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಮಂಗಳವಾರವೂ ಭಾರಿ ಮಳೆಯಾಗಿದ್ದು, ನದಿ, ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ. ಸೇತುವೆ, ದೇವಸ್ಥಾನಗಳು ಮುಳುಗಡೆಯಾಗಿವೆ.
ನಾರಾಯಣಪುರದ ಬಸವಸಾಗರ ಜಲಾಶಯದಿಂದ ಕೃಷ್ಣಾ ನದಿಗೆ 2 ಲಕ್ಷ ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ.
ಜಲಾಶಯದಿಂದ ನೀರು ಬಿಟ್ಟಿರುವ ಕಾರಣ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ ಮುಳುಗಿದೆ. ಇದರಿಂದಾಗಿ ಯಳಗುಂದಿ, ಹಂಚಿನಾಳ, ಕಡದರಗಡ್ಡಿ, ಯರಗೋಡಿ ಗ್ರಾಮಗಳ ನೇರ ಸಂಪರ್ಕ ಕಡಿದು ಹೋಗಿದೆ.
ಹೊಸಪೇಟೆಯ ತುಂಗಭದ್ರಾ ಜಲಾಶಯದಿಂದ 1.40 ಲಕ್ಷ ಕ್ಯೂಸೆಕ್ ನೀರು ತುಂಗಭದ್ರಾ ನದಿಗೆ ಹರಿಬಿಟ್ಟಿರುವುದರಿಂದ ಮಾನ್ವಿ ತಾಲ್ಲೂಕಿನ ತುಂಗಭದ್ರಾ ನದಿಪಾತ್ರದ ಗ್ರಾಮಗಳ ಗ್ರಾಮಸ್ಥರಿಗೆ ಪ್ರವಾಹ ಭೀತಿ ಉಂಟಾಗಿದೆ. ಯಾದಗಿರಿ ತಾಲ್ಲೂಕಿನ ಪಗಲಾಪುರಕೋಯಿಲೂರ ನಡುವಿನ ಹಳ್ಳದ ತಾತ್ಕಾಲಿಕ ರಸ್ತೆ ಕೊಚ್ಚಿ ಹೋಗಿದೆ.
ಸತತ ಮಳೆಗೆ ಬೀದರ್ ಜಿಲ್ಲೆಯ ಕಾರಂಜಾ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದು, ಮಂಗಳವಾರ ನದಿಗೆ ನೀರು ಹರಿಸಿದ ಕಾರಣ ಭಾಲ್ಕಿ ತಾಲ್ಲೂಕಿನ ಕಟ್ಟಿ ತೂಗಾಂವ್ ಗ್ರಾಮದ ಮಲ್ಲಿ ಕಾರ್ಜುನ ದೇವಾಲಯ ಸಂಪೂರ್ಣ ಮುಳುಗಡೆಯಾಗಿದೆ.
ಬೀದರ್, ಬಸವಕಲ್ಯಾಣ, ಹುಲಸೂರ ಹಾಗೂ ಭಾಲ್ಕಿಯಲ್ಲಿ ಮಳೆಯಾಗಿದೆ. ಕಮಲನಗರ ತಾಲ್ಲೂಕಿನಲ್ಲಿ 2 ಸಾವಿರ ಹಾಗೂ ಔರಾದ್ ತಾಲ್ಲೂಕಿನಲ್ಲಿ 1,500 ಹೆಕ್ಟೇರ್ ಬೆಳೆ ಹಾಳಾಗಿದೆ.
ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ನೀರು ಹರಿಸುತ್ತಿರುವ ಕಾರಣ ಜಿಲ್ಲೆಯ ಮಾಂಜ್ರಾ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ.
ಭಾಲ್ಕಿ ತಾಲ್ಲೂಕಿನ ಲಖನಗಾಂವ ಗ್ರಾಮದ ಬಳಿ ಮಾಂಜ್ರಾ ನದಿಗೆ ನಿರ್ಮಿಸಿರುವ ಸೇತುವೆ ಮೇಲಿಂದ ನೀರು ಹರಿಯುತ್ತಿರುವುದರಿಂದ ಸಂಚಾರ ಬಂದ್ ಆಗಿದೆ.
ಕಲಬುರಗಿ ಜಿಲ್ಲೆಯಲ್ಲಿ ಮಳೆ ಅಬ್ಬರ ಮುಂದುವರಿದಿದ್ದು, ಕಾಳಗಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ಬೆಣ್ಣೆತೊರಾ ಜಲಾಶಯದ ಹಿನ್ನೀರು ಗ್ರಾಮಕ್ಕೆ ನುಗ್ಗಿದೆ. ಇದರಿಂದಾಗಿ ಗ್ರಾಮಸ್ಥರು ತಮ್ಮ ಮನೆ, ಅಂಗಡಿಗಳನ್ನು ತೊರೆದು ಬೇರೆಡೆ ಸ್ಥಳಾಂತರಗೊಂಡಿದ್ದಾರೆ.
ಮಹಾರಾಷ್ಟ್ರದಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ಭೀಮಾ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಅಫಜಲಪುರ ತಾಲ್ಲೂಕಿನ ಸೊನ್ನ ಭೀಮಾ ಬ್ಯಾರೇಜಿನಿಂದ ನದಿಗೆ 15 ಸಾವಿರ ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ.

# ಪ್ರಚೋದನಕಾರಿ ಹೇಳಿಕೆ; ಶಾಸಕ ಯತ್ನಾಳ ವಿರುದ್ಧ ಎಫ್‌ಐಆರ್



**ಕೊಪ್ಪಳ :** ಹಿಂದೂ ಹಾಗೂ ಮುಸ್ಲಿಮರ ನಡುವೆ ಸೌಹಾರ್ದಕ್ಕೆ ಧಕ್ಕೆ ತರುವ ರೀತಿಯಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮೇಲೆ ಇಲ್ಲಿನ ನಗರ ಪೊಲೀಸ್ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.
ಮುಸ್ಲಿಂ ಯುವಕನಿಂದ ಆಗಸ್ಟ್ 3ರಂದು ಇಲ್ಲಿನ ಕುರುಬರ ಓಣಿಯ ಗವಿಸಿದ್ದಪ್ಪ ನಾಯಕ ಎನ್ನುವ ಯುವಕನ ಕೊಲೆಯಾಗಿತ್ತು.
ಅವರ ಕುಟುಂಬದವರಿಗೆ ಸಾಂತ್ವಾನ ಹೇಳಲು ಆ. 10ರಂದು ಕೊಪ್ಪಳಕ್ಕೆ ಬಂದಿದ್ದ ಯತ್ನಾಳ 'ಹಿಂದೂ ಯುವಕರು ಮುಸ್ಲಿಂ ಯುವತಿಯರನ್ನು ಮದುವೆಯಾದರೆ 5 ಲಕ್ಷ ಕೊಡುತ್ತೇನೆ. ಕೊಲೆ ಮಾಡುವ ಮುಸ್ಲಿಮರಿಗೆ ಉತ್ತರ ನೀಡಬೇಕಿದೆ. ಸದ್ಯ ರಾಜ್ಯದಲ್ಲಿ ಸಾಬರ ಸರ್ಕಾರವಿದೆ' ಎಂದು ಹೇಳಿಕೆ ನೀಡಿದ್ದರು. ಇದು ಸಾಕಷ್ಟು ಟೀಕೆಗೂ ಕಾರಣವಾಗಿತ್ತು.
ಆದ್ದರಿಂದ ಇಲ್ಲಿನ ಕುವೆಂಪು ನಗರದ ನಿವಾಸಿಯಾಗಿರುವ ಅಬ್ದುಲ್ ಕಲಾಂ ದೂರು ನೀಡಿದ್ದು 'ಯತ್ನಾಳ ಹೇಳಿಕೆಯಿಂದಾಗಿ ಎರಡು ಧರ್ಮಗಳ ನಡುವೆ ದ್ವೇಷ ಬೆಳೆಯುವಂತಾಗಿದೆ.
ಮುಸ್ಲಿಂ ಮಹಿಳೆಯರನ್ನು ಕೀಳಾಗಿ ಕೆಟ್ಟ ಮನಸ್ಥಿತಿಯಿಂದ ನೋಡುವುದಲ್ಲದೆ ಅವರನ್ನು ಅವಮಾನ ಮಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

# ತರಾವು ಪುಸ್ತಕದಲ್ಲಿ ವಿಷಯ ಸೇರ್ಪಡೆಗೆ ಒತ್ತಡ




**ಕುಷ್ಟಗಿ :** ಬಹಿರಂಗ ಹರಾಜು ಮಾಡದೆ ಪುರಸಭೆಯ ಗಮನಕ್ಕೆ ಬಾರದ ರೀತಿಯಲ್ಲಿ ಸಂತೆ ಮೈದಾನದಲ್ಲಿರುವ ವಾಣಿಜ್ಯ ಮಳಿಗೆಗಳಿಗೆ ಅಲ್ಪ ಮೊತ್ತದ ಬಾಡಿಗೆ ನಿಗದಿಪಡಿಸಿದ್ದಲ್ಲದೇ 12 ವರ್ಷಗಳವರೆಗೂ ಲೀಸ್ ನೀಡಿದ ಪ್ರಕರಣ ಇನ್ನೂ ತಾರ್ಕಿಕ ಅಂತ್ಯ ಕಂಡಿಲ್ಲ.
ಆದರೆ ಸಾಮಾನ್ಯ ಸಭೆಯಲ್ಲಿ ಮಳಿಗೆಗಳ ವಿಷಯ ಚರ್ಚೆಯಾಗದಿದ್ದರೂ ನಾಲ್ಕು ವರ್ಷಗಳ ನಂತರ ಈಗ ಠರಾವು ಪುಸ್ತಕದಲ್ಲಿ ಸೇರ್ಪಡೆ ಮಾಡಲು ಕೆಲ ಸದಸ್ಯರು ಹುನ್ನಾರ ನಡೆಸಿರುವುದು ಗೊತ್ತಾಗಿದೆ.
ಸರ್ಕಾರದ ನಿಯಮ ಉಲ್ಲಂಘಿಸಿ, ಮಾರ್ಗಸೂಚಿಗಳನ್ನು ಗಾಳಿಗೆ ತೂರಿ ಮಳಿಗೆಗಳು ಸ್ವಂತ ಆಸ್ತಿ ಎಂಬಂತೆ ತಮಗೆ ವ್ಯಾಪಾರಿಗಳೊಂದಿಗೆ ಒಳ ಒಪ್ಪಂದ ಮಾಡಿಕೊಂಡಿದ್ದು ನಕಲಿ ದಾಖಲೆಗಳ ಮೂಲಕ ಅಕ್ರಮ ಎಸಗಿರುವುದು ಸ್ಪಷ್ಟವಾಗಿದ್ದು ಕೆಲ ಸದಸ್ಯರೊಂದಿಗೆ ಪುರಸಭೆಯ ಕೆಲ ಸಿಬ್ಬಂದಿಯೂ ಅಕ್ರಮಕ್ಕೆ ಕೈಜೋಡಿಸಿದ್ದಾರೆ ಎಂದೆ ಪುರಸಭೆ ಮೂಲಗಳು ತಿಳಿಸಿವೆ.
ಅಲ್ಲದೆ ಠರಾವು ಪುಸ್ತಕದಲ್ಲಿ ಮಳಿಗೆ ಬಾಡಿಗೆ ವಿಷಯವನ್ನು ಸೇರಿಸುವಂತೆ ಸಿಬ್ಬಂದಿ ಮೇಲೆ ಮಾಜಿ ಅಧ್ಯಕ್ಷರೊಬ್ಬರು ಒತ್ತಡ ಹೇರುತ್ತಿದ್ದಾರೆ ಎನ್ನಲಾಗಿದೆ.
2ಬಾರಿನೋಟಿಸ್:ಈಮಧ್ಯೆಅನಧಿಕೃತವಾಗಿ ಮಳಿಗೆಗಳನ್ನು ದೀರ್ಘಾವಧಿವರೆಗೆ ಬಾಡಿಗೆ ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಮುಖ್ಯಾಧಿಕಾರಿ ಉಮೇಶ ಹಿರೇಮಠ ಎಂಬುವವರಿಗೆ ಕಾರಣ ಕೇಳಿ ಆ.4 ರಂದು ನೋಟಿಸ್ ನೀಡಲಾಗಿತ್ತು. ಉತ್ತರ ಬಾರದ ಕಾರಣ ಪುನ: ಆ.11 ರಂದು ಎರಡನೇ ಬಾರಿ ನೋಟಿಸ್ ನೀಡಲಾಗಿದೆ. ಬಹಿರಂಗ ಹರಾಜಿಲ್ಲದೆ 12 ವರ್ಷಗಳವರೆಗೆ ಸಂತೆ ಮೈದಾನದ ಮಳಿಗೆಗಳ ಬಾಡಿಗೆ ಒಪ್ಪಂದ ಮಾಡಿಕೊಂಡಿದ್ದರೂ ಒಪ್ಪಂದದ ದಾಖಲೆಇಲ್ಲ,ಠೇವಣಿಯೂಬಂದಿಲ್ಲಅಲ್ಲದೆ 2021ರಜು.9ರಂದುಅಧ್ಯಕ್ಷಜಿ.ಕೆ.ಹಿರೇಮಠ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಸಾಮಾನ್ಯ ಸಭೆಯ ಠರಾವು ಪುಸ್ತಕದಲ್ಲಿ ಈ ವಿಷಯವೇ ಚರ್ಚೆಗೆ ಬಂದಿಲ್ಲ, ಅದಕ್ಕೆ ಸಂಬಂಧಿಸಿದ ಒಂದೂ ದಾಖಲೆ ಇಲ್ಲ. ಹಾಗಾಗಿ ವಿವರಗಳೊಂದಿಗೆ ಸಂಬಂಧಿಸಿದ ದಾಖಲೆಗಳನ್ನೂ ಒದಗಿಸುವಂತೆ ನೋಟಿಸ್‌ದಲ್ಲಿ ತಿಳಿಸಲಾಗಿತ್ತು. ಆದರೆ ಆ.14 ರಂದು ಉಮೇಶ ಹಿರೇಮಠ ಅವರು ಉತ್ತರ ನೀಡಿದ್ದರೂ ನೋಟಿಸ್‌ದಲ್ಲಿರುವ ಅಂಶಗಳಿಗೆ ತಾಳೆಯಾಗುತ್ತಿಲ್ಲ ಎಂದು ತಿಳಿದು ಬಂದಿದೆ.

# 'ಗಾಂಧಿ ಭಾರತ್': ಪ್ರತಿ ಜಿಲ್ಲೆಯಲ್ಲಿ ವರ್ಷವಿಡೀ ಕಾರ್ಯಕ್ರಮ: ವಿನಯಕುಮಾರ ಸೊರಕೆ



**ಬೆಳಗಾವಿ :** 'ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ನೆನಪಿಗಾಗಿ ಬೆಳಗಾವಿಯಲ್ಲಿ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶ ಯಶಸ್ವಿಯಾಗಿ ನಡೆಸಿದ್ದೆವು. ಈಗ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ವತಿಯಿಂದ 'ಗಾಂಧಿ ಭಾರತ್' ಹೆಸರಿನಲ್ಲಿ ಪ್ರತಿ ಜಿಲ್ಲೆಯಲ್ಲಿ ವರ್ಷವಿಡೀ ಕಾರ್ಯಕ್ರಮ ನಡೆಸುತ್ತಿದ್ದೇವೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ ಸೊರಕೆ ಹೇಳಿದರು.
ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಶೀಘ್ರ ನಡೆಯಲಿವೆ. ಇದಕ್ಕಾಗಿ ಕಾಂಗ್ರೆಸ್‌ನ ಜನಪರ ಕಾರ್ಯಕ್ರಮಗಳನ್ನು ಪ್ರಚುರಪಡಿಸಬೇಕಿದೆ. ತಾಲ್ಲೂಕು, ಬ್ಲಾಕ್ ಮಾತ್ರವಲ್ಲ; ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಪ್ರಚಾರ ಸಮಿತಿಗೆ ಸಮಿತಿಗೆ ಸದಸ್ಯರನ್ನು ನೇಮಿಸಿಕೊಳ್ಳಲಾಗುತ್ತಿದೆ' ಎಂದರು.
ಚುನಾವಣೆ ಆಯೋಗವನ್ನು ಬಿಜೆಪಿ ತನ್ನ ಕೈಗೊಂಬೆಯಾಗಿಸಿಕೊಂಡಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಒಂದು ತಂಡದ ಮೂಲಕ ಸಮೀಕ್ಷೆ ನಡೆಸಿ, ಮತ ಕಳ್ಳತನದ ದಾಖಲೆಗಳನ್ನು ಬಿಡುಗಡೆಗೊಳಿಸಿದ್ದಾರೆ.
ಬಿಜೆಪಿಯವರು ಚುನಾವಣೆ ಆಯೋಗದ ದುರ್ಬಳಕೆ ಮಾಡಿಕೊಳ್ಳುತ್ತಿರುವ ಧೋರಣೆ ಖಂಡಿಸಿ ಕೈಗೊಳ್ಳಲಿರುವ ಹೋರಾಟದ ರೂಪುರೇಷೆಗಳ ಕುರಿತು ಚರ್ಚಿಸಲು ಆ.22ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸಭೆ ನಡೆಸಲಿದ್ದಾರೆ' ಎಂದು ತಿಳಿಸಿದರು.
ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಯೋಜನೆಗಳೆಂದು ಬಿಜೆಪಿಯವರು ಟೀಕಿಸಿದ್ದರು. ಆದರೆ,
ಇಂದು ಅದೇ ಗ್ಯಾರಂಟಿ ಯೋಜನೆಗಳಿಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಜನರು ಗ್ಯಾರಂಟಿಗಳನ್ನು ಕೊಂಡಾಡುತ್ತಿದ್ದಾರೆ' ಎಂದರು.

# ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಯುವ ಪತ್ರಕರ್ತ ಮುಜಫರ ಶಾಲಗಾರ ಅವರಿಗೆ ಸನ್ಮಾನ




**ಬಾಗಲಕೋಟೆ :** 79 ನೇ ಸ್ವಾತಂತ್ರೋತ್ಸವದಂದು ಜಿಲ್ಲಾ ಆಡಳಿತದಿಂದ ಸನ್ಮಾನಿತಗೊಂಡ ಯುವ ಪತ್ರಕರ್ತ ಸಮಾಜವೀರ ಪತ್ರಿಕೆಯ ಸಂಪಾದಕ ಮುಜಫರ ಶಾಲಗಾರ ಅವರನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖೆಯ ವತಿಯಿಂದ ಇಂದು ಸನ್ಮಾನಿಸಲಾಯಿತು.
ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಚೇರ್ಮನ್ ಆನಂದ ಜಿಗಜಿನ್ನಿ ಮಾತನಾಡಿ ದಿವಂಗತ ಎನ್. ಎಚ್. ಶಾಲಗಾರರ ನೇತೃತ್ವದಲ್ಲಿ ಕಳೆದ 40 ವರ್ಷಗಳಿಂದ ಸಮಾಜವೀರ ಪತ್ರಿಕೆಯು ಬಾಗಲಕೋಟೆ ಜಿಲ್ಲೆಯಾದ್ಯಂತ ಉತ್ತಮ ಪ್ರಸಾರ ಹೊಂದಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಅವರ ಅಗಲಿಕೆಯ ನಂತರ ಮುಜಾಫರ್ ಶಾಲಗಾರ ಅವರು ಸಮಾಜವೀರ ಪತ್ರಿಕೆಯನ್ನು ಪ್ರಾದೇಶಿಕ ಪತ್ರಿಕೆಯನ್ನಾಗಿ ಪ್ರಕಟಿಸುತ್ತಿದ್ದು ಸಂತೋಷದ ವಿಚಾರವಾಗಿದೆ. ಪತ್ರಿಕೆಯು ರಾಜ್ಯಮಟ್ಟಕ್ಕೂ ಬೆಳೆಯಲಿ ಎಂದು ಆಶಿಸುತ್ತೇನೆ ಎಂದರು.
ಬಾಗಲಕೋಟ್ ಯೂನಿಯನ್ ಆಫ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ರವಿ ಕುಮಟಗಿ ಮಾತನಾಡಿ ನಿರ್ಭಿಡೆಯಿಂದ ಪತ್ರಿಕೆ ಉದ್ಯಮವನ್ನು ನಡೆಸುತ್ತಿರುವ ಶಾಲಗಾರ ಅವರು ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ಶುಭ ಹಾರೈಸಿದರು.
ಈ ಸಂದರ್ಭದಲ್ಲಿ ಉದ್ಯಮಿಗಳಾದ ಮಲ್ಲಿಕಾರ್ಜುನ ಶೀಲವಂತರ, ಶಾಮ ಭಟ್ಟಡ, ಖ್ಯಾತ ವೈದ್ಯರುಗಳಾದ ಪ್ರಭಯ್ಯಾ ಪ್ರಭುಸ್ವಾಮಿಮಠ, ಡಾ. ರಾಘವೇಂದ್ರ ವನಕಿ ಮತ್ತಿತರರು ಉಪಸ್ಥಿತರಿದ್ದರು.

# ವಾಡಿ ಮಾರುಕಟ್ಟೆಯಲ್ಲಿ ಶೌಚಾಲಯ ಸೌಲಭ್ಯ ಒದಗಿಸಲು ಒತ್ತಾಯ



**ವಾಡಿ :** ಪಟ್ಟಣದ ಬೀದಿಗಳಲ್ಲಿ ಪ್ರತಿ ಗುರುವಾರ ವಾರದ ಸಂತೆ ನಡೆದುಕೊಂಡು ಬರುತ್ತಿದ್ದು, ತರಕಾರಿ ಮಾರಲು ಸೂಕ್ತ ಜಾಗವಿಲ್ಲದೆ ವ್ಯಾಪಾರಿಗಳು ತೊಂದರೆ ಅನುಭವಿಸುತ್ತಿದ್ದಾರೆ.
ವಾರದ ಸಂತೆ ಸುಗಮವಾಗಿ ಸಾಗಲು ಸೂಕ್ತವಾದ ಮಾರುಕಟ್ಟೆ ಸೌಲಭ್ಯ ಒದಗಿಸಬೇಕು ಎಂದು ಆಗ್ರಹಿಸಿ ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ) ಕಮ್ಯುನಿಸ್ಟ್ ಪಕ್ಷ ಆಗ್ರಹಿಸಿದೆ.
ಈ ಕುರಿತು ಗುರುವಾರ ಸ್ಥಳೀಯ ಪುರಸಭೆ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿರುವ ಎಸ್‌ಯುಸಿಐ (ಕಮ್ಯುನಿಸ್ಟ್) ನಾಯಕರು, ಅಧಿಕೃತ ಸಂತೆ ಮಾಳ ನಿರ್ಮಿಸುವಂತೆ ಒತ್ತಾಯ ಮಾಡಿದ್ದಾರೆ.
ಚಿತ್ತಾಪುರ ತಾಲೂಕಿನ ವಾಡಿ ಪಟ್ಟಣ ಬೆಳೆಯುತ್ತಿರುವ ನಗರವಾಗಿದೆ. ಇಂಗಳಗಿ, ಕುಂದನೂರ, ಬಳವಡಗಿ, ಕೊಂಚೂರ, ಹಲಕರಟಿ, ಕಮರವಾಡಿ, ಸೂಲಹಳ್ಳಿ, ರಾಮನಗರ ತಾಂಡಾ, ಮೌಳಿ ತಾಂಡಾ, ಕಡಬೂರ, ಚಾಮನೂರ, ಕೈಲಾಸ ನಗರ, ಲಕ್ಷ್ಮಿಪುರವಾಡಿ ಗ್ರಾಮಸ್ಥರ ಮಾರುಕಟ್ಟೆ ಕೇಂದ್ರ ಸ್ಥಾನವಾಗಿದೆ.
ಎಲ್ಲಾ ರೀತಿಯ ಅಗತ್ಯ ವಸ್ತುಗಳ ಖರೀದಿಗೆ ವಾಡಿ ಪಟ್ಟಣದ ಮಾರುಕಟ್ಟೆಯನ್ನೇ ಅವಲಂಬಿಸಿದ್ದಾರೆ. ಹೀಗಾಗಿ ಇಲ್ಲಿ ಗುರುವಾರ ದೊಡ್ಡ ಸಂತೆ ನಡೆಯುತ್ತದೆ. ಆದರೆ ಸಂತೆ ನಡೆಯಲು ಸೂಕ್ತವಾದ ಜಾಗದ ಕೊರತೆಯಿದೆ.
ಇಕ್ಕಟ್ಟಾದ ಗಲ್ಲಿ ರಸ್ತೆಗಳಲ್ಲಿ ಸಂತೆ ನಡೆಯುತ್ತಿರುವುದರಿಂದ ಗ್ರಾಹಕರು ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾದ ಪರಿಸ್ಥಿತಿಯಿದೆ ಎಂದು ವಿವರಿಸಿದ್ದಾರೆ.
ವಿವಿಧ ಗ್ರಾಮಗಳಿಂದ ತರಕಾರಿ ವ್ಯಾಪಾರಕ್ಕೆ ಬರುವ ನೂರಾರು ಜನ ವ್ಯಾಪಾರಿಗಳು ಮೂಲಭೂತ ಸೌಕರ್ಯದಿಂದ ವಂಚಿತಗೊಂಡಿದ್ದಾರೆ.
ವಿಶೇಷವಾಗಿ
ಮಹಿಳಾ ವ್ಯಾಪಾರಿಗಳು ಬೆಳಗ್ಗೆಯಿಂದ ಸಂಜೆ ವರೆಗೆ ಮಲಮೂತ್ರ ವಿಸರ್ಜನೆ ತಡೆದುಕೊಂಡು ಹಿಂಸಿ ಅನುಭವಿಸುತ್ತಿದ್ದಾರೆ.
ಪಟ್ಟಣದ ಯಾವೂದೇ ಸ್ಥಳದಲ್ಲಿ ಸಾರ್ವಜನಿಕ ಮೂತ್ರಾಲಯಗಳು ನಿರ್ಮಿಸಿಲ್ಲ.
ಪುರಸಭೆ ಆಡಳಿತ ಜಾರಿಯಾಗಿ ಮೂವತ್ತು ವರ್ಷಗಳು ಕಳೆದರೂ ಸುಲಭ ಶೌಚಾಲಯ ವ್ಯವಸ್ಥೆ ಕಲ್ಪಿಸುವಲ್ಲಿ ಪುರಸಭೆ ಆಡಳಿತ ವಿಫಲವಾಗಿದೆ.
ಅಲ್ಲದೆ ವಾರದ ಸಂತೆಗೆ ಬರುವ ಗ್ರಾಮೀಣ ಭಾಗದ ತರಕಾರಿ ವ್ಯಾಪಾರಿಗಳನ್ನು ಪುರಸಭೆ ಸಿಬ್ಬಂದಿಗಳೇ ಒಕ್ಕಲೆಬ್ಬಿಸಿ ದೌರ್ಜನ್ಯ ಎಸಗುತ್ತಿದ್ದು, ಇದು ನಿಲ್ಲಬೇಕು. ರಸ್ತೆಗಳನ್ನು ಅತಿಕ್ರಮಿಸಿ ಕೆಲವರು ವ್ಯಾಪಾರ ಮಾಡುತ್ತಿದ್ದು, ಕೊಳೆತ ಹಣ್ಣು ಮಾರುವ ಮೂಲಕ ಗ್ರಾಹಕರಿಗೆ ಮೋಸ ಮಾಡುತ್ತಿರುವವರ ವಿರುದ್ಧ ಕ್ರಮಕೈಗೊಳ್ಳಬೇಕು. ಆದಷ್ಟು ಬೇಗ ಅಗತ್ಯ ಸೌಲಭ್ಯಗಳಿರುವ ಮಾರುಕಟ್ಟೆ ನಿರ್ಮಿಸಬೇಕು.
ಅಲ್ಲಿವರೆಗೆ ವ್ಯಾಪಾರಿಗಳಿಗೆ ಸ್ಥಳ ನಿಗದಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.
ಅಧಿಕಾರಿಗಳು ಈ ಬೇಡಿಕೆಗಳನ್ನು ಈಡೇರಿಸಲು ಮುಂದಾಗದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಸ್‌ಯುಸಿಐ
ವಾಡಿ ನಗರ ಸಮಿತಿ ಕಾರ್ಯದರ್ಶಿ ಶರಣು ಹೇರೂರ ಎಚ್ಚರಿಕೆ ನೀಡಿದ್ದಾರೆ.
ಮುಖಂಡರಾದ ರಾಜು ಒಡೆಯರಾಜ್, ಚಂದ್ರಕಾಂತ ಪಗಲಾಪುರ, ಶ್ರೀಶೈಲ ಕೆಂಚಗುಂಡಿ ಸೇರಿದಂತೆ ಇತರರು ನಿಯೋಗದಲ್ಲಿ ಇದ್ದರು.

# ಮುಚಖಂಡಿ ಗ್ರಾಮದಲ್ಲಿ ಅಗ್ನಿ ಉತ್ಸವ ಸಂಭ್ರಮ



**ಬಾಗಲಕೋಟೆ :** ತಾಲ್ಲೂಕಿನ ಸುಕ್ಷೇತ್ರ ಮುಚಖಂಡಿ ಗ್ರಾಮದ ವೀರಭದ್ರೇಶ್ವರ ಅಗ್ನಿ(ಅಗ್ಗಿ) ಉತ್ಸವ ಸಡಗರ ಸಂಭ್ರಮದಿಂದ ಜರುಗಿತು.
ಶ್ರಾವಣ ಮಾಸದ ಕೊನೆಯ ಮಂಗಳವಾರ ಜರುಗುವ ಅಗ್ಗಿ ಉತ್ಸವದಲ್ಲಿ ಜಿಲ್ಲೆಯ ಸೇರಿದಂತೆ ರಾಜ್ಯಾದ್ಯಾಂತ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು.
ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಅವರು ವೀರಭದ್ರೇಶ್ವರ ದರ್ಶನ ಪಡೆದುಕೊಂಡ ಬಳಿಕ ಅಗ್ಗಿ ಕುಂಡದ ಬಳಿ ಬಂದು ಪಲ್ಲಕ್ಕಿಗೆ ಪೂಜೆ ಸಲ್ಲಿಸಿದರು. ಭಕ್ತರ ಮಧ್ಯದಲ್ಲಿ ನಿಂತು ಅಗ್ಗಿ ಉತ್ಸವವನ್ನು ವೀಕ್ಷಿಸಿದರು.
ಅಗ್ಗಿ ಉತ್ಸವಕ್ಕೂ ಮುನ್ನ ಬೆಳಿಗ್ಗೆ ವೀರಭದ್ರೇಶ್ವರನಿಗೆ ರುದ್ರಾಭಿಷೇಕ ಹಾಗೂ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ವೀರಭದ್ರೇಶ್ವರನಿಗೆ ಹೂವುಗಳು, ಹಣ್ಣುಗಳಿಂದ ಅಲಂಕಾರ ಮಾಡಲಾಗಿತ್ತು.
ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಬಿಡುವಿಲ್ಲದೇ ಮಳೆ ಸುರಿಯಿತು. ಸಹಸ್ರಾರು ಭಕ್ತರು ಅಗ್ಗಿ ಕುಂಡದಲ್ಲಿ ಹಾಯ್ದು ಭಕ್ತಿಯನ್ನು ಸಮರ್ಪಿಸುವ ಸಂದರ್ಭದಲ್ಲಿ ಸುಮಾರು ಒಂದೂವರೆ ಗಂಟೆ ಕಾಲ ಮಳೆರಾಯ ಬಿಡುವು ನೀಡಿದ್ದರಿಂದ ಅಗ್ಗಿ ಉತ್ಸವ ಸುಗಮವಾಗಿ ಜರುಗಿತು. ಸಂಜೆ 4 ಗಂಟೆಗೆ ಚಿಕ್ಕ ರಥೋತ್ಸವ ದೇವಸ್ಥಾನದಿಂದ ಆರಂಭಗೊಂಡು ಗ್ರಾಮದ ಅಗಸಿ ಬಾಗಿಲವೆರಗೆ ಜರುಗಿತು. ಸುಮಂಗಲೆಯರ ಆರುತಿ, ವಾದ್ಯವೈಭವಗಳೊಂದಿಗೆ ಜರುಗಿದ ಚಿಕ್ಕರಥೋತ್ಸವಕ್ಕೆ ರಸ್ತೆಯ ಇಕ್ಕೆಲುಗಳಲ್ಲಿ ನಿಂತ ಭಕ್ತರು ಉತ್ತತ್ತಿ, ಬಾಳೆ ಹಣ್ಣು ಸಮರ್ಪಿಸಿ ಭಕ್ತಿಯನ್ನು ಅರ್ಪಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State